ಸೌಹಾರ್ದ ಸಹಕಾರಿ ಚಳವಳಿಯ ಅಭಿವೃದ್ಧಿಗೆ ಮೀಸಲಾಗಿರುವ ಏಕೈಕ ಮಾಸಪತ್ರಿಕೆ


# ಸ್ವಾಭಿಮಾನಿ ಸಹಕಾರಿ

Swabhimani Sahakari

Volume - 12
Issue - 6
Pages - 20
₹ - 12
June - 2014


ಸ್ವಾಯತ್ತತೆ
ಸ್ವಯಂ ಆಡಳಿತ
ಸ್ವಯಂ ನಿಯಂತ್ರಣ
ನಮ್ಮ ಧ್ಯೇಯ

## ದೇಶದ 15ನೇ ಪ್ರಧಾನಿ
# ಶ್ರೀ ನರೇಂದ್ರ ಮೋದಿ



ಸಬ್ ಕಾ ಸಾಥ್
ಸಬ್ ಕಾ ವಿಕಾಸ್

ಕೇಂದ್ರ ಸಚಿವ ಸಂಪುಟದಲ್ಲಿ ರಾಜ್ಯದ ಸಚಿವರು



ಶ್ರೀ ಡಿ.ವಿ. ಸದಾನಂದ ಗೌಡ
ರೈಲ್ವೆ ಸಚಿವರು



ಶ್ರೀ ಅನಂತಕುಮಾರ್
ರಾಸಾಯನಿಕ ಮತ್ತು ರಸಗೊಬ್ಬರ ಸಚಿವರು



ಶ್ರೀ ಎಂ. ವೆಂಕಯ್ಯನಾಯ್ಡು
ಕೇಂದ್ರ ನಗರಾಭಿವೃದ್ಧಿ ಸಚಿವರು



ಶ್ರೀ ಜಿ.ಎಂ. ಸಿದ್ದೇಶ್ವರ
ನಾಗರೀಕ ವಿಮಾನಯಾನ ಸಚಿವರು




## ನಗರ ಯಶಸ್ವಿನಿ ಆರೋಗ್ಯ ರಕ್ಷಣಾ ಯೋಜನೆಗೆ ಚಾಲನೆ

ನಗರ ಯಶಸ್ವಿನಿ ಆರೋಗ್ಯ ರಕ್ಷಣಾ ಯೋಜನೆಯನ್ನು ಮುಖ್ಯ ಮಂತ್ರಿ ಶ್ರೀ ಸಿದ್ಧರಾಮಯ್ಯ ಉದ್ಘಾಟಿಸಿದರು. ಸಹಕಾರ ಸಚಿವ ಶ್ರೀ ಎಚ್.ಎಸ್. ಮಹದೇವ ಪ್ರಸಾದ್, ವಾರ್ತಾ ಸಚಿವ ಶ್ರೀ ರೋಷನ್ ಬೇಗ್, ಸಹಕಾರ ಇಲಾಖಾ ಕಾರ್ಯದರ್ಶಿ ಡಾ. ಸಿ. ಸೋಮಶೇಖರ್, ಸಹಕಾರ ಸಂಘಗಳ ನಿಬಂಧಕರಾದ ಡಾ. ಎನ್.ಎಸ್. ಚನ್ನಪ್ಪಗೌಡರವರುಗಳು ಉಪಸ್ಥಿತರಿದ್ದರು.

ಸೌಹಾರ್ದ ಸಹಕಾರಿಗಳ ಸಂಖ್ಯೆ : ೨೮೦೦ । 'ಇ' ಸ್ಟಾಂಪಿಂಗ್ ಕೇಂದ್ರಗಳ ಸಂಖ್ಯೆ : ೫೯೬

# ಸೌಹಾರ್ದ ಸಹಕಾರಿಗಳ ಶಾಸನ ಬದ್ಧ ಕಾರ್ಯನಿರ್ವಹಣೆಯಲ್ಲಿ ಲೋಪಗಳಿಗೆ ಅವಕಾಶ ಬೇಡ



ರಾಜ್ಯದ ಸೌಹಾರ್ದ ಸಹಕಾರಿಗಳ ಸಂಖ್ಯೆ 2800 ಕ್ಕೆ ತಲುಪಲಿದೆ. ಈ ಕ್ಷೇತ್ರದ ಬೆಳವಣಿಗೆ ವೇಗವಾಗಿದೆ. ಸೌಹಾರ್ದ ಸಹಕಾರಿ ಕ್ಷೇತ್ರದ ಚಟುವಟಿಕೆಗಳನ್ನು ಸಾರ್ವಜನಿಕರು ಪ್ರೋತ್ಸಾಹಿಸುವುದರ ಜೊತೆಗೆ ಸರಕಾರದಲ್ಲಿಯೂ ಸಹ ಈ ಕ್ಷೇತ್ರದ ಬೆಳವಣಿಗೆಯ ಬಗ್ಗೆ ಆಸಕ್ತಿ ಇದೆ. ಈ ಕ್ಷೇತ್ರದ ಕಾರ್ಯಚಟುವಟಿಕೆಗಳು ಉತ್ತಮವಾಗಿ ನಡೆದಿವೆ. ಇನ್ನೂ ಹೆಚ್ಚು ಪರಿಣಾಮಕಾರಿಯಾಗಿ ದೋಷರಹಿತವಾಗಿ ಪಾರದರ್ಶಕತೆಯಿಂದ ಕೂಡಿರಬೇಕೆಂಬುದು ಸಂಯುಕ್ತ ಸಹಕಾರಿಯ ಅಪೇಕ್ಷೆಯಾಗಿದೆ.

ರಾಜ್ಯದ ಸೌಹಾರ್ದ ಸಹಕಾರಿ ಚಳುವಳಿ ಗುಣಮಟ್ಟ ಉತ್ತಮವಾಗಿರಬೇಕು ಎನ್ನುವ ಉದ್ದೇಶದಿಂದ ಸಂಯುಕ್ತ ಸಹಕಾರಿಯು ತನಗೆ ವಹಿಸಿರುವ ಶಾಸನಬದ್ಧ ಕಾರ್ಯಚಟುವಟಿಕೆಗಳ ಜೊತೆಗೆ ಸೌಹಾರ್ದ ಸಹಕಾರಿಗಳಿಗೆ ಅಗತ್ಯವಾಗುವ ಶಿಕ್ಷಣ ತರಬೇತಿ ಹಾಗೂ ಮಾರ್ಗದರ್ಶನವನ್ನು ನೀಡುತ್ತಿರುವುದು ತಮಗೆಲ್ಲ ತಿಳಿದಿದೆ.

ಸಂಯುಕ್ತ ಸಹಕಾರಿಯ ಅಧಿಕಾರಿಗಳು ವಿವಿಧ ಸೌಹಾರ್ದ ಸಹಕಾರಿಗಳಿಗೆ ಭೇಟಿ ನೀಡಿದಾಗ ಹಲವು ಲೋಪಗಳನ್ನು ಗಮನಿಸಲಾಗುತ್ತಿದೆ. ಅವುಗಳಲ್ಲಿ ಪ್ರಮುಖವಾಗಿ ಅನಗತ್ಯವಾಗಿ ಶಾಖೆಗಳನ್ನು ತೆರೆಯುವದು, ಠೇವಣಿ ಸಂಗ್ರಹಣೆಗಾಗಿ ಎಜಂಟರುಗಳನ್ನು ನೇಮಿಸಿ ಅವರಿಗೆ ಅಧಿಕ ಕಮಿಶನ್ ನೀಡಿ ಠೇವಣಿದಾರರಿಗೆ ಹೆಚ್ಚಿನ ಬಡ್ಡಿಯ ಆಮಿಷ ನೀಡುವುದು, ಠೇವಣಿದಾರರಿಗೆ ಠೇವಣಿಗಳನ್ನು ಸರಿಯಾದ ಸಮಯಕ್ಕೆ ವಾಪಸ್ಸು ನೀಡದಿರುವುದು, ಸದಸ್ಯರಲ್ಲದವರೊಂದಿಗೆ ವ್ಯವಹರಿಸುವುದು, ಸಮೂಹ ಸಂಸ್ಥೆಗಳ ವ್ಯವಹಾರಗಳನ್ನು ಸೌಹಾರ್ದ ಸಹಕಾರಿಯ ವ್ಯವಹಾರದಂತೆ ಬಿಂಬಿಸುವುದು, ಮೂರನೇಯ ವ್ಯಕ್ತಿಯ ಚೆಕ್ ಸಂಗ್ರಹಿಸುವಲ್ಲಿ ಕೆವೈಸಿ ನಿಯಮಗಳನ್ನು ಪಾಲಿಸದಿರುವುದು, ಗುಣಾತ್ಮಕವಲ್ಲದ ಬದ್ಧತಾರಹಿತ ಸಾಲ ನೀಡುವುದು, ಸಾಲ ನೀಡುವಿಕೆಯಲ್ಲಿ ನಿಯಮಗಳನ್ನು ರಚಿಸದೆ ಮನಸೋ ಇಚ್ಛೆ ಸಾಲ ನೀಡುವುದು, ವಾರ್ಷಿಕ ಸಭೆಗಳನ್ನು ನಿಗದಿತ ಸಮಯದಲ್ಲಿ ನಡೆಸದಿರುವುದು, ಆಡಳಿತ ಮಂಡಳಿಯ ಚುನಾವಣೆಗೆ ಕ್ರಮವಿಡದಿರುವುದು, ಸಮಯಕ್ಕೆ ಸರಿಯಾಗಿ ಲೆಕ್ಕ ಪರಿಶೋಧನೆ ಮಾಡಿಸದಿರುವುದು, ಸೌಹಾರ್ದ ಸಹಕಾರಿ ಕಾಯ್ದೆ ಕಲಂ 34ರಡಿಯಲ್ಲಿ ಸಮಯಕ್ಕೆ ಸರಿಯಾಗಿ ಸಂಬಂದಿಸಿದವರಿಗೆ ಮಾಹಿತಿ ಸಲ್ಲಿಸದಿರುವುದು ಇತ್ಯಾದಿ. ಇವುಗಳ ಬಗ್ಗೆ ಅಲಕ್ಷಮಾಡಿದರೆ ಮತ್ತು ಅಸಡ್ಡೆತನ ತೋರಿದರೆ ಕಾನೂನು ಕ್ರಮ ಎದುರಿಸುವುದು ಅನಿವಾರ್ಯವಾಗುತ್ತದೆ ಎಂಬುದನ್ನು ಎಲ್ಲ ಸೌಹಾರ್ದ ಸಹಕಾರಿಗಳು ಗಮನಿಸಬೇಕು.

ಸೌಹಾರ್ದ ಸಹಕಾರಿಗಳ ಕಾರ್ಯಚಟುವಟಿಕೆಗಳ ಬಗ್ಗೆ ರಾಜ್ಯದ ಜನತೆ, ಸಹಕಾರಿಗಳು ಹಾಗೂ ಸರಕಾರ ಬಹಳ ನೀರಿಕ್ಷೆ ಇಟ್ಟುಕೊಂಡಿದೆ. ಈ ನೀರಿಕ್ಷೆ ಹುಸಿಹೋಗದಂತೆ ಎಚ್ಚರದಿಂದ ಕಾರ್ಯನಿರ್ವಹಿಸುವುದು ನಮ್ಮೆಲ್ಲರ ಜವಾಬ್ದಾರಿ. ಆದ್ದರಿಂದ ರಾಜ್ಯದ ಎಲ್ಲ ಸೌಹಾರ್ದ ಸಹಕಾರಿಗಳು ಕಾನೂನಿನ ವ್ಯಾಪ್ತಿಯೊಳಗೆ ಶಿಸ್ತು ಹಾಗೂ ಬದ್ಧತೆಯಿಂದ ಸೌಹಾರ್ದ ಸಹಕಾರಿ ಕ್ಷೇತ್ರದ ಬೆಳವಣಿಗೆಗೆ ಕಾರ್ಯನಿರ್ವಹಿಸುವಿರಾಗಿ ಆಶಿಸುತ್ತೇನೆ.

▸▸ ಗುರುನಾಥ ಜ್ಯಾಂತಿಕರ, ಅಧ್ಯಕ್ಷರು

"ಸಮಯಕ್ಕೆ ಸರಿಯಾಗಿ ಲೆಕ್ಕ ಪರಿಶೋಧನೆ ಮಾಡಿಸದಿರುವುದು, ಸೌಹಾರ್ದ ಸಹಕಾರಿ ಕಾಯ್ದೆ ಕಲಂ 34ರಡಿಯಲ್ಲಿ ಸಮಯಕ್ಕೆ ಸರಿಯಾಗಿ ಸಂಬಂದಿಸಿದವರಿಗೆ ಮಾಹಿತಿ ಸಲ್ಲಿಸದಿರುವುದು ಇತ್ಯಾದಿ. ಇವುಗಳ ಬಗ್ಗೆ ಅಲಕ್ಷಮಾಡಿದರೆ ಮತ್ತು ಅಸಡ್ಡೆತನ ತೋರಿದರೆ ಕಾನೂನು ಕ್ರಮ ಎದುರಿಸುವುದು ಅನಿವಾರ್ಯವಾಗುತ್ತದೆ ಎಂಬುದನ್ನು ಎಲ್ಲ ಸೌಹಾರ್ದ ಸಹಕಾರಿಗಳು ಗಮನಿಸಬೇಕು."

ಸ್ವಾಭಿಮಾನಿ ಸಹಕಾರಿ ಸಂಪಾದಕ ಮಂಡಳಿ

ಶ್ರೀ ಗುರುನಾಥ ಜಾಂತಿಕರ
ಗೌರವ ಅಧ್ಯಕ್ಷರು

ಶ್ರೀ ಹೆಚ್.ವಿ.ರಾಜೀವ
ಗೌರವ ಉಪಾಧ್ಯಕ್ಷರು

ಶ್ರೀ ಎಸ್.ಆರ್.ಸತೀಶಚಂದ್ರ
ಗೌರವ ಸದಸ್ಯರು

ಶ್ರೀ ಶರಣಗೌಡ ಜಿ. ಪಾಟೀಲ್
ಸಂಪಾದಕರು

ಶ್ರೀ ವಿ.ಜೆ.ಕಾರಕೂನ
ಸಂಚಾಲಕರು

ಶ್ರೀ ರಘುನಂದನ ಕೆ.
ಸದಸ್ಯರು

ಒಳ ಪುಟಗಳಲ್ಲಿ . . .

ಮೋದಿ ಸಂಪುಟದ ಸಚಿವರು, ಖಾತೆಗಳ ವಿವರ .................. 4
16ನೇ ಲೋಕಸಭೆಯ ಕರ್ನಾಟಕದ ನೂತನ ಸಂಸದರು ........ 5
ಸಾರ್ವಜನಿಕರ ಆರೋಗ್ಯ ರಕ್ಷಣೆ ಸರಕಾರದ ಜವಾಬ್ದಾರಿ : ಅಗತ್ಯ ಬಿದ್ದರೆ ಹೆಚ್ಚಿನ ಅನುದಾನ ಬಿಡುಗಡೆಗೆ ಕ್ರಮ - ಮುಖ್ಯಮಂತ್ರಿ ಶ್ರೀ ಸಿದ್ದರಾಮಯ್ಯ ........ 6
ಸಹಕಾರ ಇಲಾಖೆಯ ಸಾಧನೆ ತೃಪ್ತಿಕರ - ಸಚಿವ ಶ್ರೀ ಹೆಚ್. ಎಸ್. ಮಹದೇವಪ್ರಸಾದ್........ 7
ಸ್ವಾಭಿಮಾನಿ ಸೌಹಾರ್ದ ಕ್ರೆಡಿಟ್ ಕೋ-ಆಪರೇಟಿವ್ : ಐದನೇ ವಾರ್ಷಿಕಸಾಮಾನ್ಯಸಭೆಮತ್ತುಪ್ರತಿಭಾಪುರಸ್ಕಾರ........8
ಸೌಹಾರ್ದ ಸಹಕಾರಿಗಳ ನಿರ್ದೇಶಕರ ಆಡಳಿತ ಪರಿಣಿತಿ ಅಭಿವೃದ್ಧಿ ತರಬೇತಿ ಶಿಬಿರ ........ 10
ಸಹಕಾರಿಗಳ ನಿರ್ದೇಶಕರು ಸಹಕಾರಿಯ ಧ್ಯೇಯಂತೆ ಕಾರ್ಯನಿರ್ವಹಿಸಬೇಕು-ಗುರುನಾಥಜ್ಯಾಂತಿಕರ........11
ತರಬೇತಿಯಿಂದ ಸಹಕಾರಿಗಳ ಅಭಿವೃದ್ಧಿ ಸಾಧ್ಯ - ಶ್ರೀ ಹೆಚ್. ಎಸ್.ನಾಗರಾಜಯ್ಯ ........ 12
ಸಂಯುಕ್ತ ಸಹಕಾರಿಯ ಬೆಳಗಾವಿ ವಿಭಾಗದಲ್ಲಿ ಸರಣಿ ಉಪನ್ಯಾಸ ಮಾಲಿಕೆ ........ 13
ಜೂನ್ ಮಾಹೆಯತರಬೇತಿಕಾರ್ಯಕ್ರಮಗಳು........14
11ನೇ ತಂಡದ ವ್ಯಕ್ತಿತ್ವ ವಿಕಸನ ತರಬೇತಿ ........ 15
ವೆಬ್‌ಸೈಟ್ ಪರಿಚಯ ಮಾಲಿಕೆ ........ 17
ಕೌಶಲ್ಯ। ವೇಗ। ಗೆಲುವು ........ 18
ಸಹಕಾರಿ ಬ್ಯಾಂಕುಗಳ ಆಡಳಿತ ಮಂಡಳಿಯಲ್ಲಿ ವೃತ್ತಿಪರತೆ ... 19

# ಸಂಪಾದಕೀಯ

## ಯಶಸ್ವಿನಿ ನಗರ ಸಹಕಾರಿಗಳ ಆರೋಗ್ಯ ರಕ್ಷಣಾ ಯೋಜನೆಗೆ ಚಾಲನೆ

ದಿನಾಂಕ : 27/5/2014ರಂದು ಯಶಸ್ವಿನಿ ನಗರ ಸಹಕಾರಿಗಳ ಆರೋಗ್ಯ ರಕ್ಷಣಾ ಯೋಜನೆಯು ಮಾನ್ಯ ಮುಖ್ಯಮಂತ್ರಿಗಳಿಂದ ಅಧಿಕೃತವಾಗಿ ಉದ್ಘಾಟನೆ ಗೊಂಡಿದೆ. ಈ ಯೋಜನೆಯಡಿಯಲ್ಲಿ ನಗರ ಹಾಗೂ ಪಟ್ಟಣದಲ್ಲಿರುವ ರಾಜ್ಯದ ಎಲ್ಲಾ ಸೌಹಾರ್ದ ಸಹಕಾರಿಗಳ ಸದಸ್ಯರು ಯಶಸ್ವಿನಿ ನಗರ ಸಹಕಾರಿಗಳ ಆರೋಗ್ಯ ರಕ್ಷಣಾ ಯೋಜನೆಯನ್ನು ಬಳಸಿಕೊಳ್ಳಬಹುದಾಗಿದೆ. ಸೌಹಾರ್ದ ಸಹಕಾರಿಗಳು ತಮ್ಮ ಸದಸ್ಯರೊಂದಿಗೆ ನಿಕಟ ಸಂಪರ್ಕವನ್ನು ಹೊಂದಲು ಹಾಗೂ ಸದಸ್ಯರಿಗೆ ಆರೋಗ್ಯದ ಬಗ್ಗೆ ವಿಶೇಷ ನೆರವನ್ನು ಒದಗಿಸುವ ಅವಕಾಶ ಇದಾಗಿದೆ.

ಈ ಯೋಜನೆಯಡಿ ಸೌಲಭ್ಯಗಳನ್ನು ಪಡೆಯಲು ಸದಸ್ಯರು ಸೌಹಾರ್ದ ಸಹಕಾರಿಗಳಲ್ಲಿ ಸದಸ್ಯತ್ವವನ್ನು ಪಡೆದು ಕನಿಷ್ಠ 3 ತಿಂಗಳುಗಳಾಗಿರಬೇಕು. ಸದಸ್ಯರ ಕುಟುಂಬದ ಎಲ್ಲರಿಗೂ ಈ ಯೋಜನೆಯು ಅನ್ವಯಿಸುತ್ತದೆ. ಈ ಯೋಜನೆಯ ಪ್ರಯೋಜನ ಪಡೆಯಲು ಉದ್ದೇಶಿಸುವ ಪ್ರತಿಯೊಬ್ಬರು ವಾರ್ಷಿಕ ವಂತಿಗೆ ರೂ. 710/- ರಂತೆ ಪ್ರಧಾನ ಅರ್ಜಿದಾರರು ಮತ್ತು ಅವರ ಕುಟುಂಬದ ಉದ್ದೇಶಿಸಿದ ಪ್ರತಿಯೊಬ್ಬ ಸದಸ್ಯರಿಗೆ ಕಡ್ಡಾಯವಾಗಿ ಪಾವತಿಸಬೇಕು. ಈ ಯೋಜನೆಯಡಿ ನವಜಾತ ಶಿಶುವಿನಿಂದ ಹಿಡಿದು ಜೀವಿತಾವಧಿಯವರೆಗೆ ಯೋಜನೆಯ ಸೌಲಭ್ಯವನ್ನು ಪಡೆಯಲು ಅರ್ಹರಾಗಿರುತ್ತಾರೆ. ಪರಿಶಿಷ್ಟ ಜಾತಿ ಹಾಗೂ ಪರಿಶಿಷ್ಟ ವರ್ಗದ ಸದಸ್ಯರು ಮತ್ತು ಅವರ ಕುಟುಂಬ ವರ್ಗದ ಪ್ರತಿ ಸದಸ್ಯರಿಗೂ ರೂ. 510/- ಗಳನ್ನು ಪಾವತಿಸಬೇಕು. ಇದರಲ್ಲಿ ರೂ. 200/-ಗಳ ವಂತಿಗೆಯನ್ನು ಪರಿಶಿಷ್ಟ ಜಾತಿ/ಪರಿಶಿಷ್ಟ ಪಂಗಡದ ಸದಸ್ಯರಿಗೆ ಸರ್ಕಾರದ ವತಿಯಿಂದಲೇ ಭರಿಸಲಾಗುವುದು. ಯಶಸ್ವಿನಿ ಸದಸ್ಯರುಗಳನ್ನು ನೋಂದಾಯಿಸಲು ಕೊನೆಯ ದಿನಾಂಕ : 15.07.2014 ಆಗಿರುವುದರಿಂದ ಸೌಹಾರ್ದ ಸಹಕಾರಿಗಳು ತಮ್ಮ ವ್ಯಾಪ್ತಿಯಲ್ಲಿರುವ ಸಹಕಾರ ಇಲಾಖೆಯ ಉಪನಿಬಂಧಕರನ್ನು ಭೇಟಿ ಮಾಡಿ ನಿಗದಿತ ಅರ್ಜಿ ನಮೂನೆಯಲ್ಲಿ ಸದಸ್ಯರಾಗುವವರ ವಿವರಗಳನ್ನು ಭರ್ತಿ ಮಾಡಿ, ಯಶಸ್ವಿನಿ ನಗರ ಸಹಕಾರಿಗಳ ಆರೋಗ್ಯ ರಕ್ಷಣಾ ಯೋಜನೆಯ ಕಾರ್ಡ್‌ನ್ನು ಪಡೆಯುವುದು.

ಯಶಸ್ವಿನಿ ಯೋಜನೆಯಲ್ಲಿ ಕರ್ನಾಟಕ ರಾಜ್ಯ ಪತ್ರದಲ್ಲಿ ಪ್ರಕಟಿಸಿರುವ ಯಶಸ್ವಿನಿ ಟ್ರಸ್ಟ್ ಗುರುತಿಸಿದ 823 ಶಸ್ತ್ರ ಚಿಕಿತ್ಸೆಗಳು ಹಾಗೂ ಕಾಲ ಕಾಲಕ್ಕೆ ಟ್ರಸ್ಟ್‌ನಿಂದ ರಾಜ್ಯ ಪತ್ರದಲ್ಲಿ ಪ್ರಕಟಿಸಿದಂತಹ ಯಾವುದೇ ಹೆಚ್ಚಿನ ಶಸ್ತ್ರ ಚಿಕಿತ್ಸೆಗಳನ್ನು ಷರತ್ತುಗಳಿಗೆ ಒಳಪಟ್ಟು ರಾಜ್ಯದಾದ್ಯಂತ ಟ್ರಸ್ಟ್‌ನಿಂದ ಅಂಗೀಕರಿಸಲ್ಪಟ್ಟ ಕರ್ನಾಟಕ ರಾಜ್ಯ ಪತ್ರದಲ್ಲಿ ಪ್ರಕಟಿಸಿರುವ/ ಪ್ರಕಟವಾಗುವ ಆಸ್ಪತ್ರೆಗಳಲ್ಲಿ ನಿಗದಿತ ಮಿತಿಯೊಳಗೆ ನಗದು ರಹಿತವಾಗಿ ಪ್ರಯೋಜನ ಪಡೆಯಲು ಅವಕಾಶವಿದೆ.

ಈ ಯೋಜನೆಯಲ್ಲಿ ರಾಜ್ಯದ ಸೌಹಾರ್ದ ಸಹಕಾರಿಗಳ ಸದಸ್ಯರುಗಳಿಗೆ ಆರೋಗ್ಯ ರಕ್ಷಣೆಯ ಸೌಲಭ್ಯವಿರುವುದರಿಂದ ಎಲ್ಲಾ ಸೌಹಾರ್ದ ಸಹಕಾರಿಗಳು ಕೂಡಲೇ ತಮ್ಮ ಸದಸ್ಯರುಗಳನ್ನು ಈ ಯೋಜನೆಯ ಸದಸ್ಯರನ್ನಾಗಿಸಲು ಕ್ರಮವಿಡಬೇಕು. ಸೌಹಾರ್ದ ಸಹಕಾರಿಗಳಿಗೆ ತಮ್ಮ ಸದಸ್ಯರುಗಳಿಗೆ ಹೆಚ್ಚಿನ ಹಾಗೂ ಅವಶ್ಯಕ ಸೇವೆಯನ್ನು ನೀಡುವ ಅವಕಾಶ ಇದಾಗಿರುವುದರಿಂದ ಇದರ ಸದುಪಯೋಗವನ್ನು ಎಲ್ಲರೂ ಪಡೆಯ ಬೇಕೆಂದು ಸಂಯುಕ್ತ ಸಹಕಾರಿಯು ಅಪೇಕ್ಷಿಸುತ್ತದೆ. ಸೌಹಾರ್ದ ಸಹಕಾರಿಗಳು ಇದರ ಪ್ರಯೋಜನ ಪಡೆಯಲು ಸೂಚಿಸಿದೆ.

# ಮೋದಿ ಸಂಪುಟದ ಸಚಿವರು, ಖಾತೆಗಳ ವಿವರ



## ಸಂಪುಟದ ಸಚಿವರು

| | |
|---|---|
| ನರೇಂದ್ರ ಮೋದಿ | ಪ್ರಧಾನಿ,ಅಣು ಶಕ್ತಿ, ಬಾಹ್ಯಾಕಾಶ, ಸಿಬ್ಬಂದಿ, ಸಾರ್ವಜನಿಕ ಅಹವಾಲು ಮತ್ತು ಪಿಂಚಣಿ, ಪ್ರಮುಖ ನೀತಿ ನಿರ್ವಹಣೆ ಹಾಗೂ ವಿತರಣೆ ಮಾಡಿರದ ಎಲ್ಲಾ ಖಾತೆಗಳು |
| ರಾಜನಾಥ್ ಸಿಂಗ್ | ಗೃಹ |
| ಸುಷ್ಮಾ ಸ್ವರಾಜ್ | ವಿದೇಶಾಂಗ ವ್ಯವಹಾರ, ಸಾಗರೋತ್ತರ ವ್ಯವಹಾರ |
| ಅರುಣ್ ಜೇಟ್ಲಿ | ಹಣಕಾಸು, ರಕ್ಷಣೆ, ಕಾರ್ಪೊರೇಟ್ ವ್ಯವಹಾರ |
| ವೆಂಕಯ್ಯ ನಾಯ್ಡು | ನಗರಾಭಿವೃದ್ಧಿ, ಸಂಸದೀಯ ವ್ಯವಹಾರ, ವಸತಿ ಮತ್ತು ನಗರ ಬಡತನ ನಿವಾರಣೆ |
| ನಿತಿನ್ ಗಡ್ಕರಿ | ಹೆದ್ದಾರಿ, ಸಾರಿಗೆ, ಬಂದರು |
| ಸದಾನಂದಗೌಡ | ರೈಲ್ವೆ |
| ಉಮಾ ಭಾರತಿ | ಜಲಸಂಪನ್ಮೂಲ, ನದಿ ಅಭಿವೃದ್ಧಿ, ಗಂಗಾನದಿ ಶುದ್ಧೀಕರಣ |
| ನಜ್ಮಾ ಹೆಪ್ತುಲ್ಲಾ | ಅಲ್ಪಸಂಖ್ಯಾತರ ವ್ಯವಹಾರಗಳು |
| ರಾಮ್‌ವಿಲಾಸ್ ಪಾಸ್ವಾನ್ (ಎಲ್‌ಜೆಪಿ) | ಆಹಾರ, ನಾಗರಿಕ ಪೂರೈಕೆ ಹಾಗೂ ಗ್ರಾಹಕ ವ್ಯವಹಾರ |
| ಕಲ್‌ರಾಜ್ ಮಿಶ್ರಾ | ಸಣ್ಣ, ಅತಿ ಸಣ್ಣ ಹಾಗೂ ಮಧ್ಯಮ ಪ್ರಮಾಣದ ಕೈಗಾರಿಕೆಗಳು |
| ಮೇನಕಾ ಗಾಂಧಿ | ಮಹಿಳಾ ಮತ್ತು ಮಕ್ಕಳ ಕಲ್ಯಾಣ |
| ಅನಂತ್ ಕುಮಾರ್ | ರಾಸಾಯನಿಕ ಮತ್ತು ರಸಗೊಬ್ಬರ |
| ರವಿಶಂಕರ್ ಪ್ರಸಾದ್ | ಕಾನೂನು, ದೂರಸಂಪರ್ಕ ಮತ್ತು ಮಾಹಿತಿ ತಂತ್ರಜ್ಞಾನ, |
| ಅಶೋಕ್ ಗಜಪತಿ ರಾಜು (ಟಿಡಿಪಿ) | ನಾಗರಿಕ ವಿಮಾನಯಾನ |
| ಅನಂತ್ ಗೀತೆ (ಶಿವಸೇನೆ) | ಬೃಹತ್ ಕೈಗಾರಿಕೆ, ಸಾರ್ವಜನಿಕ ವಲಯದ ಕೈಗಾರಿಕೆ |
| ಹರ್‌ಸಿಮ್ರತ್ ಕೌರ್ ಬಾದಲ್ (ಅಕಾಲಿ ದಳ) | ಆಹಾರ ಸಂಸ್ಕರಣೆ |
| ನರೇಂದ್ರ ಸಿಂಗ್ ತೋಮರ್ | ಉಕ್ಕು, ಗಣಿ , ಕಾರ್ಮಿಕ ಮತ್ತು ಉದ್ಯೋಗ |
| ಜುವಲ್ ಒರಾಮ್ | ಬುಡಕಟ್ಟು ವ್ಯವಹಾರಗಳು |
| ರಾಧಾಮೋಹನ್ ಸಿಂಗ್ | ಕೃಷಿ |
| ತಾವರ್‌ಚಂದ್ ಗೆಹ್ಲೋಟ್ | ಸಾಮಾಜಿಕ ನ್ಯಾಯ ಮತ್ತು ಸಬಲೀಕರಣ |
| ಸ್ಮೃತಿ ಇರಾನಿ | ಮಾನವ ಸಂಪನ್ಮೂಲ ಅಭಿವೃದ್ಧಿ |
| ಹರ್ಷವರ್ಧನ್ | ಆರೋಗ್ಯ ಮತ್ತು ಕುಟುಂಬ ಕಲ್ಯಾಣ |

## ರಾಜ್ಯ ಸಚಿವರು (ಸ್ವತಂತ್ರ ನಿರ್ವಹಣೆ ಮತ್ತು ಕ್ಯಾಬಿನೆಟ್ ಸಚಿವರಿಗೆ ಸಹಾಯ)

| | |
|---|---|
| ವಿ.ಕೆ.ಸಿಂಗ್ | ಈಶಾನ್ಯ ಪ್ರದೇಶ ಅಭಿವೃದ್ಧಿ, ವಿದೇಶಾಂಗ ವ್ಯವಹಾರ |
| ರಾವ್ ಇಂದ್ರಜಿತ್ ಸಿಂಗ್ | ಯೋಜನೆ, ಅಂಕಿಅಂಶಗಳು ಮತ್ತು ಯೋಜನೆ ಅನುಷ್ಠಾನ, ರಕ್ಷಣೆ |
| ಸಂತೋಷ್ ಗಂಗ್ವಾರ್ | ಜವಳಿ, ಸಂಸದೀಯ ವ್ಯವಹಾರಗಳು, ಜಲಸಂಪನ್ಮೂಲ, ನದಿ ಅಭಿವೃದ್ಧಿ, ಗಂಗಾನದಿ ಶುದ್ಧೀಕರಣ |
| ಶ್ರೀಪಾದ ನಾಯ್ಕ್ | ಸಂಸ್ಕೃತಿ, ಪ್ರವಾಸೋದ್ಯಮ |
| ಧರ್ಮೇಂದ್ರ ಪ್ರಧಾನ್ | ಪೆಟ್ರೋಲಿಯಂ ಮತ್ತು ನೈಸರ್ಗಿಕ ಅನಿಲ |
| ಸರ್ವಾನಂದ ಸೋನ್ವಾಲ್ | ಕೌಶಲ ಅಭಿವೃದ್ಧಿ, ಕ್ರೀಡೆ ಮತ್ತು ಯುವಜನ ಅಭಿವೃದ್ಧಿ, ವಾಣಿಜ್ಯೋದ್ಯಮ |
| ಪ್ರಕಾಶ್ ಜಾವಡೇಕರ್ | ಮಾಹಿತಿ ಮತ್ತು ಪ್ರಸಾರ, ಪರಿಸರ, ಅರಣ್ಯ ಮತ್ತು ಹವಾಮಾನ ಇಲಾಖೆ |
| ಪಿಯುಷ್ ಗೋಯಲ್ | ವಿದ್ಯುತ್, ಕಲ್ಲಿದ್ದಲು, ಹೊಸ ಮತ್ತು ನವೀಕರಿಸಬಲ್ಲ ಇಂಧನಗಳು |
| ಜಿತೇಂದ್ರ ಸಿಂಗ್ | ವಿಜ್ಞಾನ ಮತ್ತು ತಂತ್ರಜ್ಞಾನ, ಭೂ ವಿಜ್ಞಾನ, ಪ್ರಧಾನಿ ಕಚೇರಿ, ಸಿಬ್ಬಂದಿ, ಸಾರ್ವಜನಿಕ ಅಹವಾಲು ಮತ್ತು ಪಿಂಚಣಿ, ಅಣು ಶಕ್ತಿ, ಬಾಹ್ಯಾಕಾಶ |
| ನಿರ್ಮಲಾ ಸೀತಾರಾಮನ್ | ವಾಣಿಜ್ಯ ಮತ್ತು ಉದ್ಯಮ, ಹಣಕಾಸು, ಕಾರ್ಪೊರೇಟ್ ವ್ಯವಹಾರಗಳು |


## ರಾಜ್ಯ ಸಚಿವರು

| | |
|---|---|
| ಜಿ.ಎಂ.ಸಿದ್ದೇಶ್ವರ | ನಾಗರಿಕ ವಿಮಾನಯಾನ |
| ಮನೋಜ್ ಸಿನ್ಹಾ | ರೈಲ್ವೆ |
| ನಿಹಾಲ್ ಚಂದ್ | ರಾಸಾಯನಿಕ ಮತ್ತು ರಸಗೊಬ್ಬರ |
| ಉಪೇಂದ್ರ ಕುಶವಾಹ್ (ಆರ್‌ಎಲ್‌ಎಸ್‌ಪಿ ) | ಗ್ರಾಮೀಣಾಭಿವೃದ್ಧಿ, ಪಂಚಾಯಿತಿ ರಾಜ್, ಕುಡಿಯುವ ನೀರು ಮತ್ತು ನೈರ್ಮಲ್ಯ |
| ಪಿ.ರಾಧಾಕೃಷ್ಣನ್ | ಬೃಹತ್ ಕೈಗಾರಿಕೆ ಮತ್ತು ಸಾರ್ವಜನಿಕ ಉದ್ಯಮಗಳು |
| ಕಿರಣ್ ರಿಜಿಜು | ಗೃಹ |
| ಕೃಷ್ಣಪಾಲ್ ಗುಜ್ಜರ್ | ಬಂದರು, ರಸ್ತೆ ಸಾರಿಗೆ ಮತ್ತು ಹೆದ್ದಾರಿ |
| ಸಂಜಯ್ ಕುಮಾರ್ ಬಲ್ಯಾನ್ | ಕೃಷಿ, ಆಹಾರ ಸಂಸ್ಕರಣೆ |
| ಮನ್‌ಸುಖ್‌ಭಾಯ್ ವಸಾವ | ಬುಡಕಟ್ಟು ವ್ಯವಹಾರಗಳು |
| ರಾವ್ ಸಾಹೇಬ್ ದಾನ್ವೆ | ಆಹಾರ ಮತ್ತು ನಾಗರಿಕ ಸರಬರಾಜು, ಗ್ರಾಹಕ ವ್ಯವಹಾರಗಳು |
| ವಿಷ್ಣು ದೇವ್ ಸಾಯಿ | ಗಣಿ, ಉಕ್ಕು, ಕಾರ್ಮಿಕ ಮತ್ತು ಉದ್ಯೋಗ |
| ಸುದರ್ಶನ್ ಭಗತ್ | ಸಾಮಾಜಿಕ ನ್ಯಾಯ ಮತ್ತು ಸಬಲೀಕರಣ |



# 16ನೇ ಲೋಕಸಭೆಯ ಕರ್ನಾಟಕದ ನೂತನ ಸಂಸದರು

16ನೇ ಲೋಕಸಭೆಯ ಚುನಾವಣೆಯ ಫಲಿತಾಂಶ ಎನ್‌ಡಿಎ ಪರವಾಗಿದ್ದು, ಪ್ರಧಾನಿಯಾಗಿ ಶ್ರೀ ನರೇಂದ್ರ ಮೋದಿಯವರು ಹೊರಹೊಮ್ಮಿದ್ದಾರೆ. ಕರ್ನಾಟಕದಿಂದ ಲೋಕಸಭೆಗೆ ನೂತನವಾಗಿ ಆಯ್ಕೆಯಾಗಿರುವ ಸಂಸದರು.


ಹೆಚ್.ಡಿ. ದೇವೇಗೌಡ
ಹಾಸನ


ಡಿ.ವಿ. ಸದಾನಂದಗೌಡ
ಬೆಂಗಳೂರು ಉ.


ಅನಂತ್ ಕುಮಾರ್
ಬೆಂಗಳೂರು ದ.



ಜಿ.ಎಂ. ಸಿದ್ದೇಶ್ವರ
ದಾವಣಗೆರೆ


ಮಲ್ಲಿಕಾರ್ಜುನ ಖರ್ಗೆ
ಗುಲ್ಬರ್ಗ


ಎಂ. ವೀರಪ್ಪಮೊಯಿಲಿ
ಚಿಕ್ಕಬಳ್ಳಾಪುರ


ಕೆ.ಹೆಚ್. ಮುನಿಯಪ್ಪ
ಕೋಲಾರ



ಬಿ.ಎಸ್.ಯಡಿಯೂರಪ್ಪ
ಶಿವಮೊಗ್ಗ


ಪ್ರಕಾಶ ಹುಕ್ಕೇರಿ
ಚಿಕ್ಕೋಡಿ


ರಮೇಶ್ ಜಿಗಜಿಣಗಿ
ವಿಜಾಪುರ


ಶಿವಕುಮಾರ ಉದಾಸಿ
ಹಾವೇರಿ


ಪ್ರಹ್ಲಾದ ಜೋಷಿ
ಧಾರವಾಡ


ಸುರೇಶ ಅಂಗಡಿ
ಬೆಳಗಾವಿ


ಬಿ.ವಿ. ನಾಯಕ
ರಾಯಚೂರು


ಶೋಭಾ ಕರಂದ್ಲಾಜೆ
ಉಡುಪಿ-ಚಿಕ್ಕಮಗಳೂರು


ಭಗವಂತ ಖೂಭ
ಬೀದರ್


ನಳಿನ್‌ಕುಮಾರ್ ಕಟೀಲು
ದ.ಕನ್ನಡ


ಚಂದ್ರಪ್ಪ ಬಿ.ಎನ್.
ಚಿತ್ರದುರ್ಗ


ಅನಂತಕುಮಾರ ಹೆಗಡೆ
ಉ.ಕನ್ನಡ


ಸಿ.ಎಸ್.ಪುಟ್ಟರಾಜು
ಮಂಡ್ಯ


ಪ್ರತಾಪ ಸಿಂಹ
ಮೈಸೂರು



ಆರ್.ಧ್ರುವನಾರಾಯಣ
ಚಾಮರಾಜನಗರ


ಡಿ.ಕೆ. ಸುರೇಶ್
ಬೆಂಗಳೂರು ಗ್ರಾ.


ಕರಡಿ ಸಂಗಣ್ಣ
ಕೊಪ್ಪಳ


ಪಿ.ಸಿ. ಮೋಹನ್
ಬೆಂಗಳೂರು ಕೇಂದ್ರ


ಮುದ್ದಹನುಮೇಗೌಡ
ತುಮಕೂರು


ಪಿ.ಸಿ. ಗದ್ದಿಗೌಡರ
ಬಾಗಲಕೋಟೆ


ಬಿ. ಶ್ರೀರಾಮುಲು
ಬಳ್ಳಾರಿ

# ಸಾರ್ವಜನಿಕರ ಆರೋಗ್ಯ ರಕ್ಷಣೆ ಸರಕಾರದ ಜವಾಬ್ದಾರಿ : ಅಗತ್ಯ ಬಿದ್ದರೆ ಹೆಚ್ಚಿನ ಅನುದಾನ ಬಿಡುಗಡೆಗೆ ಕ್ರಮ – ಮುಖ್ಯಮಂತ್ರಿ ಶ್ರೀ ಸಿದ್ದರಾಮಯ್ಯ





ನಗರ ಯಶಸ್ವಿನಿ ಆರೋಗ್ಯ ರಕ್ಷಣಾ ಯೋಜನೆಯನ್ನು ಮುಖ್ಯ ಮಂತ್ರಿ ಶ್ರೀ ಸಿದ್ಧರಾಮಯ್ಯ ಉದ್ಘಾಟಿಸಿದರು. ಸಹಕಾರ ಸಚಿವ ಶ್ರೀ ಎಚ್.ಎಸ್. ಮಹದೇವ ಪ್ರಸಾದ್, ವಾರ್ತಾ ಸಚಿವ ಶ್ರೀ ರೋಷನ್ ಬೇಗ್, ಸಹಕಾರ ಇಲಾಖಾ ಕಾರ್ಯದರ್ಶಿ ಡಾ. ಸಿ. ಸೋಮಶೇಖರ್, ಸಹಕಾರ ಸಂಘಗಳ ನಿಬಂಧಕರಾದ ಡಾ. ಎನ್.ಎಸ್. ಚನ್ನಪ್ಪಗೌಡರವರುಗಳು ಉಪಸ್ಥಿತರಿದ್ದರು.

ರಾಜ್ಯದಲ್ಲಿ ಗ್ರಾಮೀಣ ಯಶಸ್ವಿನಿ ಆರೋಗ್ಯ ರಕ್ಷಣಾ ಯೋಜನೆಯನ್ನು ಕಳೆದ 2003–04ರಲ್ಲಿ ಪ್ರಾರಂಭಿಸಲಾಗಿದೆ. ಅದರಂತೆ ನಗರ ಪ್ರದೇಶದ ಬಡವರಿಗೂ ಈ ಯೋಜನೆಯ ಅವಶ್ಯಕತೆಯನ್ನು ಕಂಡು ನಗರ ಯಶಸ್ವಿನಿ ಆರೋಗ್ಯ ರಕ್ಷಣಾ ಯೋಜನೆಗೆ ಚಾಲನೆ ನೀಡಲಾಗಿದೆ. ಎಲ್ಲಾ ಸಹಕಾರ ಸಂಘಗಳ ಸದಸ್ಯರಿಗೂ ಈ ಯೋಜನೆಯಡಿಯಲ್ಲಿ ಪ್ರತಿಫಲ ಸಿಗುವಂತೆ ಕ್ರಮವಿಡಬೇಕೆಂದು ಮುಖ್ಯಮಂತ್ರಿ ಶ್ರೀ ಸಿದ್ದರಾಮಯ್ಯ ಸೂಚಿಸಿದರು.

ಮೇ 27ರಂದು ಬೆಂಗಳೂರು ವಿಶ್ವ ವಿದ್ಯಾಲಯ ಜ್ಞಾನಜ್ಯೋತಿ ಸಭಾಂಗಣದಲ್ಲಿ ನಗರ ಯಶಸ್ವಿನಿ ಆರೋಗ್ಯ ರಕ್ಷಣಾ ಯೋಜನೆಯನ್ನು ಅಧಿಕೃತವಾಗಿ ಉದ್ಘಾಟಿಸಿ, ಸಾಂಕೇತಿಕವಾಗಿ ಕೆಲ ಫಲಾನುಭವಿಗಳಿಗೆ ಕಾರ್ಡ್ ವಿತರಿಸಿ, ಈಗಾಗಲೇ ಫಲಾನುಭಾವಿಗಳಾಗಿರುವ ಕೆಲವರಿಗೆ ಸನ್ಮಾನಿಸಿ, ನಗರ ಯಶಸ್ವಿನಿ ಆರೋಗ್ಯ ರಕ್ಷಣೆಯ ಲಾಂಛನವನ್ನು ಬಿಡುಗಡೆ ಮಾಡಿ ಅವರು ಮಾತನಾಡಿದರು.

ಈ ಯೊಜನೆಯಡಿಯಲ್ಲಿ ಈಗಾಗಲೇ 823 ಕಾಯಿಲೆಗಳ ಚಿಕಿತ್ಸೆಗೆ ಅವಕಾಶವಿದ್ದು, ಆರೋಗ್ಯ ರಕ್ಷಣೆ ಮಾಡಿಕೊಳ್ಳುವ ಶಕ್ತಿ ಇಲ್ಲದವರಿಗಾಗಿ ಈ ಯೋಜನೆ ನೆರವಾಗಲಿದೆ. ಮುಂದಿನ ದಿನಗಳಲ್ಲಿ ಇತರೆ ಕಾಯಿಲೆಗಳ ಚಿಕಿತ್ಸೆಯನ್ನು ಈ ಯೋಜನೆಯಡಿಗೆ ಸೇರಿಸಲಾಗುವುದು ಎಂದು ತಿಳಿಸಿದರು.

ಅಲ್ಲದೆ ಈ ಯೋಜನೆ ಜೊತೆಗೆ ಕಾರ್ಯನಿರ್ವಹಿಸುವ ಆಸ್ಪತ್ರೆಗಳು ಸೇವಾ ಮನೋಭಾವದಿಂದ ಕಾರ್ಯನಿರ್ವಹಿಸುವುದು ಅಗತ್ಯ ಎಂದು ತಿಳಿಸಿದರು. ವೈದ್ಯರು ಶ್ರೀಮಂತರಿಂದ ಅಂದರೆ ಸಶಕ್ತರಿಂದ ಚಿಕಿತ್ಸೆಗೆ ಹಣಪಡೆಯುವುದಕ್ಕೆ ಅಭ್ಯಂತರವಿಲ್ಲ. ಆದರೆ ಬಡವರಿಂದ ಹಣ ತೆಗೆದುಕೊಳ್ಳುವಾಗ ಮಾನವೀಯ ಮೌಲ್ಯಗಳಿಗೆ ಆದ್ಯತೆ ನೀಡುವುದು ಅಗತ್ಯ ಎಂದು ಅವರು ವೈದ್ಯರುಗಳಿಗೆ ಕಿವಿಮಾತು ಹೇಳಿದರು.

(Rich will Pay poor will pray) ರೋಗ ತಡೆಗೆ ಕ್ರಮವಿಡುವುದಕ್ಕಿಂತ ರೋಗ ನಿರೋಧಕ ಶಕ್ತಿಯನ್ನು ಹೆಚ್ಚಿಸುವುದಕ್ಕೆ ವೈದ್ಯರು ಸಲಹೆ ನೀಡುವುದು ಅಗತ್ಯ. ಇದರಿಂದಾಗಿ ಪ್ರತಿಯೊಬ್ಬರು ಕನಿಷ್ಟ 70 ರಿಂದ 80 ವರ್ಷಗಳವರೆಗೆ ಬದುಕಲು ಸಾಧ್ಯ ಎಂದರು.

ಸದ್ಯ ಈ ಯೋಜನೆಗೆ ಆಯವ್ಯಯದಲ್ಲಿ 10 ಕೋಟಿ ರೂ.ಗಳನ್ನು ಒದಗಿಸಲಾಗಿದ್ದು, ಅಗತ್ಯವೆನಿಸಿದರೆ ಇನ್ನೂ ಹೆಚ್ಚಿನ ಹಣಕಾಸಿನ ನೆರವು ಒದಗಿಸಲು ಸರಕಾರ ಬದ್ಧವಾಗಿದೆ ಎಂದು ತಿಳಿಸಿದರು.



## ಸಹಕಾರ ಇಲಾಖೆಯ ಸಾಧನೆ ತೃಪ್ತಿಕರ – ಸಚಿವ ಶ್ರೀ ಹೆಚ್.ಎಸ್. ಮಹದೇವಪ್ರಸಾದ್

ಗ್ರಾಮೀಣ ಆರೋಗ್ಯ ರಕ್ಷಣೆಯ ಯೋಜನೆಯಡಿಯಲ್ಲಿ 75 ಲಕ್ಷ ಜನರಿಗೆ ಸದಸ್ಯತ್ವ ಪಡೆಯಲು ಅವಕಾಶವಿದ್ದು, ಇದುವರೆಗೆ 6 ಲಕ್ಷ ಜನರು ಈ ಯೋಜನೆಯ ಪ್ರಯೋಜನ ಪಡೆದಿದ್ದಾರೆ. ಆದರೆ ನಗರ ಪ್ರದೇಶದ ಜನರಿಗೆ ಇದರ ಪ್ರಯೋಜನ ಇರಲಿಲ್ಲ ಆದ್ದರಿಂದ ಈ ಸಾಲಿನ ಆಯವ್ಯಯದಲ್ಲಿ ಈ ಯೋಜನೆಯ ಅನುಷ್ಠಾನಕ್ಕಾಗಿ 10 ಕೋಟಿ ರೂ.ಗಳನ್ನು ಕಾಯ್ದಿರಿಸಲಾಗಿದೆ. ಈ ಯೋಜನೆ 1-6-2014 ರಿಂದ ಜಾರಿಗೆ ಬರಲಿದೆ ಎಂದು ಸಹಕಾರ ಸಚಿವ ಶ್ರೀ ಮಹದೇವಪ್ರಸಾದ್ ತಿಳಿಸಿದರು.




ಮೇ 27ರಂದು ಬೆಂಗಳೂರು ವಿಶ್ವ ವಿದ್ಯಾಲಯ ಜ್ಞಾನಜ್ಯೋತಿ ಸಭಾಂಗಣದಲ್ಲಿ ನಗರ ಯಶಸ್ವಿನಿ ಆರೋಗ್ಯ ರಕ್ಷಣಾ ಯೋಜನೆ ಉದ್ಘಾಟನಾ ಸಮಾರಂಭದಲ್ಲಿ ಮುಖ್ಯಅತಿಥಿಗಳಾಗಿ ಭಾಗವಹಿಸಿ ಯಶಸ್ವಿನಿ ನಗರ ಆರೋಗ್ಯ ಯೋಜನೆಯ ಕೈಪಿಡಿ ಹಾಗೂ ಸಹಕಾರ ಇಲಾಖೆಯ 1 ವರ್ಷದ ಸಾಧನೆಯ ಕೈಪಿಡಿಗಳನ್ನು ಬಿಡುಗಡೆಮಾಡಿ ಅವರು ಮಾತನಾಡಿದರು.

ಸಹಕಾರ ಇಲಾಖೆಯ ಸಾಧನೆ ತೃಪ್ತಿಕರ ವಾಗಿದೆ. ಪ್ರಸಕ್ತ ಸಾಲಿನಲ್ಲಿ ಜಾರಿಮಾಡಿರುವ ಪ್ರಗತಿಪರ ಯೋಜನೆಗಳನ್ನು ಮತ್ತು ರೈತ ಸಮುದಾಯಕ್ಕೆ, ಆರ್ಥಿಕವಾಗಿ ಹಿಂದುಳಿದವರಿಗೆ, ಮಹಿಳೆಯರಿಗೆ, ಪರಿಶಿಷ್ಟಜಾತಿ ಹಾಗೂ ವರ್ಗದ ಜನರಿಗೆ ಸೌಲಭ್ಯಗಳ ಕುರಿತು ವಿವರ ನೀಡಿದರು.

## ಸದಸ್ಯರಲ್ಲದವರಿಗೂ ಈ ಯೋಜನೆ ವಿಸ್ತರಿಸುವಂತಾಗಬೇಕು – ಸಚಿವ ಶ್ರೀ ರೋಷನ್ ಬೇಗ್

ಸಹಕಾರ ಸಂಘಗಳ ಸದಸ್ಯರಲ್ಲದವರಿಗೂ ಈ ಯೋಜನೆಯಡಿ ಪ್ರಯೋಜನವಾಗುವಂತೆ ಮಾಡಬೇಕು ಮತ್ತು ವೈದ್ಯ ಸಮುದಾಯ ಹಾಗೂ ಸರಕಾರವು ಬಡವರಿಗೆ ಕಡಿಮೆ ಬೆಲೆಯಲ್ಲಿ ಔಷಧಿಗಳು ದೊರೆಯುವಂತೆ ಮಾಡಬೇಕು ಎಂದು ಮೂಲ ಸೌಕರ್ಯಗಳ, ವಕ್ಫ್ ಹಾಗೂ ವಾರ್ತಾ ಸಚಿವರಾದ ಶ್ರೀ ರೋಷನ್ ಬೇಗ್ ವಿನಂತಿಸಿದರು.

ಸಮಾರಂಭದ ಅಧ್ಯಕ್ಷತೆಯನ್ನು ವಹಿಸಿ ಅವರು ಮಾತನಾಡಿದರು. ಸಹಕಾರ ಇಲಾಖೆಯ ಕಾರ್ಯದರ್ಶಿ ಡಾ.ಸಿ.ಸೋಮಶೇಖರ್ ಎಲ್ಲಾ ಅತಿಥಿ ಗಣ್ಯರನ್ನು ಸ್ವಾಗತಿಸಿ, ಈ ಯೋಜನೆಯ ಉದ್ಘಾಟನೆಯ ಕುರಿತು ಪ್ರಾಸ್ತಾವಿಕ ನುಡಿಗಳನ್ನು ಹೇಳಿದರು. ಸಹಕಾರ ಇಲಾಖೆ ನಿಬಂಧಕ ಡಾ. ಎನ್.ಎಸ್. ಚನ್ನಪ್ಪಗೌಡ ವಂದನಾರ್ಪಣೆ ಸಲ್ಲಿಸಿದರು. ಕಾರ್ಯಕ್ರಮದಲ್ಲಿ ಶಾಸಕ ಶ್ರೀ ಕೆ.ಎನ್.ರಾಜಣ್ಣ, ಸಂಯುಕ್ತ ಸಹಕಾರಿಯ ಉಪಾಧ್ಯಕ್ಷ ಶ್ರೀ ಹೆಚ್.ವಿ.ರಾಜೀವ, ವ್ಯವಸ್ಥಾಪಕ ನಿರ್ದೇಶಕ ಶ್ರೀ ಶರಣಗೌಡ ಪಾಟೀಲ್ ಹಾಗೂ ಕ್ಯಾಸ್ಕರ್ಡ್ ಬ್ಯಾಂಕಿನ ಅಧ್ಯಕ್ಷ ಶ್ರೀ ಶಿವರಾಮ್, ಸಂಯುಕ್ತ ಸಹಕಾರಿಯ ನಿರ್ದೇಶಕ ಶ್ರೀ ಬಿ.ಹೆಚ್.ಕೃಷ್ಣಾರೆಡ್ಡಿ, ಬೆಂಗಳೂರು ಜಿಲ್ಲಾ ಬೆಂಗಳೂರು ಗ್ರಾಮಾಂತರ ಜಿಲ್ಲಾ ಕೇಂದ್ರ ಸಹಕಾರ ಬ್ಯಾಂಕಿನ ಅಧ್ಯಕ್ಷ ಶ್ರೀ ಹನುಮಂತಯ್ಯ ಹಾಗೂ ವಿವಿಧ ಪಟ್ಟಣ ಸಹಕಾರ ಬ್ಯಾಂಕುಗಳ, ಕ್ರೆಡಿಟ್ ಸಹಕಾರ ಸಂಘಗಳ




ಅಧ್ಯಕ್ಷರು ನಿರ್ದೇಶಕರು, ಸೌಹಾರ್ದ ಸಹಕಾರಿಗಳ ಅಧ್ಯಕ್ಷರು, ನಿರ್ದೇಶಕರುಗಳು ಸಹಕಾರಿ ಇಲಾಖೆಯ ಹಿರಿಯ ಅಧಿಕಾರಿಗಳು ಸಂಯುಕ್ತ ಸಹಕಾರಿಯ ಅಧಿಕಾರಿಗಳು ಸೇರಿದಂತೆ 2000ಕ್ಕೂ ಹೆಚ್ಚು ಪ್ರತಿನಿಧಿಗಳು ಭಾಗವಹಿಸಿದ್ದರು.

**ಯೋಜನೆಯ ಟ್ರಸ್ಟಿಗಳಿಗೆ ಕೃತಜ್ಞತೆ :** ಯಶಸ್ವಿನಿ ಯೋಜನೆಯ ಟ್ರಸ್ಟಿಗಳಾದ ನಾರಾಯಣ ಹೃದಯಾಲಯದ ಡಾ. ದೇವಿಶೆಟ್ಟಿ, ಜಯದೇವ ಹೃದಯರೋಗ ಆಸ್ಪತ್ರೆಯ ಡಾ.ಸಿ.ಎನ್.ಮಂಜುನಾಥ, ಬಿಜಾಪುರದ ಮಕ್ಕಳ ರೋಗಗಳ ತಜ್ಞ ಡಾ. ಶ್ರೀ ಎಲ್.ಹೆಚ್.ಬಿದರಿ, ಫೋರ್ಟಿಸ್ ಆಸ್ಪತ್ರೆಯ ಡಾ.ಚಂದ್ರಮೌಳಿ, ನಾರಾಯಣ ನೇತ್ರಾಲಯದ ಡಾ.ಭುಜಂಗಶೆಟ್ಟಿಯವರ ಸೇವೆಯನ್ನು ಶ್ಲಾಘಿಸಿ ಕೃತಜ್ಞತೆಯನ್ನು ಸಲ್ಲಿಸಲಾಯಿತು.

## ಸ್ವಾಭಿಮಾನಿ ಸೌಹಾರ್ದ ಕ್ರೆಡಿಟ್ ಕೋ-ಆಪರೇಟಿವ್ : ಐದನೇ ವಾರ್ಷಿಕ ಸಾಮಾನ್ಯ ಸಭೆ ಮತ್ತು ಪ್ರತಿಭಾ ಪುರಸ್ಕಾರ



ನಗರದ ಸ್ವಾಭಿಮಾನಿ ಸೌಹಾರ್ದ ಕ್ರೆಡಿಟ್ ಕೋ–ಆಪರೇಟಿವ್ ಲಿ, ತನ್ನ ಐದನೇ ವಾರ್ಷಿಕ ಸಾಮಾನ್ಯ ಸಭೆಯನ್ನು ಇತ್ತೀಚೆಗೆ ನಗರದ ವಿ.ವಿ.ಪುರಂ, ಬಿ.ಅರಸೋಜಿರಾವ್ ಕಲ್ಯಾಣ ಮಂಟಪದಲ್ಲಿ ಆಯೋಜಿಸಿತ್ತು. ಸಮಾರಂಭದ ಅಧ್ಯಕ್ಷತೆಯನ್ನು ಸಹಕಾರಿಯ ಅಧ್ಯಕ್ಷರಾದ ಶ್ರೀ.ಬಿ.ವಿ ಸದಾನಂದ ರೆಡ್ಡಿ ವಹಿಸಿದ್ದರು. ಈ ಸಂದರ್ಭದಲ್ಲಿ ಸದಸ್ಯರ ಪ್ರತಿಭಾವಂತ ಮಕ್ಕಳು ಎಸ್.ಎಸ್.ಎಲ್.ಸಿ/ಪಿ.ಯು.ಸಿ. ಪರೀಕ್ಷೆಗಳಲ್ಲಿ ಉತ್ತಮ ಅಂಕಗಳಿಸಿದವರಿಗೆ ಪ್ರತಿಭಾ ಪುರಸ್ಕಾರಗಳನ್ನು ನೀಡಲಾಯಿತು.

## ಅಕ್ಷಯ ಕ್ರೆಡಿಟ್ ಸೌಹಾರ್ದ ಸಹಕಾರಿ : ಇ-ಸ್ಟ್ಯಾಂಪಿಂಗ್ ಕೇಂದ್ರ ಉದ್ಘಾಟನೆ



ಭಾರತದ ಜೀವನಾಡಿಯಾದ ಗ್ರಾಮಗಳ ಸುಧಾರಣೆಯಾಗ ಬೇಕಾದರೆ ಜನಸಾಮಾನ್ಯರು ಆರ್ಥಿಕವಾಗಿ ಸದೃಢ ಹೊಂದಬೇಕು. ಅಂತಹ ಸದೃಢತೆಗೆ ಸೌಹಾರ್ದ ಸಹಕಾರಿಗಳ ಸೇವಾಮನೋಭಾವನೆ ಅತ್ಯವಶ್ಯಕವೆಂದು ಖ್ಯಾತ ವರದಿಗಾರರಾದ ಡಿ.ಸುರೇಶ್ ಅಭಿಪ್ರಾಯಪಟ್ಟರು.

ಸಹಕಾರ ಕ್ಷೇತ್ರವನ್ನು ಬೆಳೆಸಲು ಸೌಹಾರ್ದ ಸಹಕಾರಿಗಳು ಠೇವಣಿಗಳ ಕ್ರೋಡೀಕರಣ, ಸಾಲ ನೀಡುವ ಸಾಂಪ್ರದಾಯಿಕ ಸೇವೆಗಳನ್ನಲ್ಲದೆ ಸಹಕಾರ ತತ್ವದ ಮೂಲಕ ಸಮಾಜಕ್ಕಾಗಿ ಇನ್ನಿತರ ಸೇವೆಗಳ ಮೂಲಕ ಒಗ್ಗೂಡಿ ಕೆಲಸ ಮಾಡುವ ಅಗತ್ಯವಿದೆ. ಇಂತಹ ಅಗತ್ಯಗಳಲ್ಲಿ ಇ– ಸ್ಟ್ಯಾಂಪಿಂಗ್ ವಿತರಿಸುವ ಸೇವೆಯೂ ಒಂದು. ಈ ನಿಟ್ಟಿನಲ್ಲಿ ಶ್ರೀ ಅಕ್ಷಯ ಕ್ರೆಡಿಟ್ ಸೌಹಾರ್ದ ಸಹಕಾರಿಯು ಹುಣಸಮಾರನಹಳ್ಳಿಯ ಸುತ್ತಮುತ್ತಲ ನಾಗರೀಕರ ಅನುಕೂಲಕ್ಕಾಗಿ ಇ–ಸ್ಟ್ಯಾಂಪಿಂಗ್ ಸೇವೆಯನ್ನು ಪ್ರಾರಂಭಿಸಿರುವುದು ಶ್ಲಾಘನೀಯ ಎಂದು ಇ–ಸ್ಟ್ಯಾಂಪಿಂಗ್ ಸೌಲಭ್ಯವನ್ನು ಉದ್ಘಾಟಿಸಿ ಮಾತನಾಡಿದರು.

## ಗೃಹ ನಿರ್ಮಾಣ ಸಹಕಾರ ಸಂಘಗಳ ಸಮಸ್ಯೆ ನಿವಾರಣೆಗೆ ಏಕಗವಾಕ್ಷಿ ಯೋಜನೆ ಜಾರಿಗೆ ಚಿಂತನೆ

ಪ್ರಸಕ್ತ ಇರುವ ಕಾನೂನಿನಡಿಯಲ್ಲಿ ಗೃಹ ನಿರ್ಮಾಣ ಸಹಕಾರ ಸಂಘಗಳು ಬಡಾವಣೆಗಳನ್ನು ನಿರ್ಮಿಸಿ ತಮ್ಮ ಸದಸ್ಯರಿಗೆ ಹಂಚಲು ಹಲವಾರು ವರ್ಷಗಳ ವಿಳಂಬವಾಗುತ್ತಿರುವುದನ್ನು ತಪ್ಪಿಸಿ ಸಂಘದ ಸದಸ್ಯರಿಗೆ ಸುಲಭವಾಗಿ ಮತ್ತು ಶೀಘ್ರವಾಗಿ ನಿವೇಶನಗಳನ್ನು ದೊರಕಿಸಿಕೊಡುವ ಉದ್ದೇಶದಿಂದ ನೂತನ ಮಾರ್ಗದರ್ಶಿ ಸೂತ್ರಗಳನ್ನು ರಚಿಸಲಾಗುತ್ತಿದೆ.

ಇದಕ್ಕಾಗಿ ಉನ್ನತ ಮಟ್ಟದ ಸಮಿತಿಯೊಂದನ್ನು ರಚಿಸಲಾಗುತ್ತಿದೆ. ಸಮಿತಿಯ ಶಿಫಾರಸ್ಸಿನ ಆಧಾರದ ಮೇಲೆ ಏಕ ಗವಾಕ್ಷಿ ಯೋಜನೆಯನ್ನು ಸದ್ಯದಲ್ಲಿಯೇ ಜಾರಿಗೆ ಕೊಡಲಾಗುವುದೆಂದು ಸಹಕಾರಿ ಇಲಾಖೆಯ ಕೈಪಿಡಿಯಲ್ಲಿ ತಿಳಿಸಲಾಗಿದೆ.

# ಸಹಕಾರ ಕುರಿತು ಸರಣಿ ಉಪನ್ಯಾಸ ಮಾಲಿಕೆ – ತರಬೇತಿಯ ಹೊಸ ಪ್ರಯೋಗ

ವಿಶ್ವದ ಅರ್ಥ ವ್ಯವಸ್ಥೆಗಳಲ್ಲಿ ಸಹಕಾರ ಕ್ಷೇತ್ರ ಮಹತ್ವದ ಪಾತ್ರವನ್ನು ನಿರ್ವಹಿಸುತ್ತಿದೆ ಎಂದು ರುಜುವಾತಾಗಿದೆ. ಸಹಕಾರ ಸಂಘಟನೆಗಳು ಉತ್ತಮ ರಾಷ್ಟ್ರ ನಿರ್ಮಾಣ ಮಾಡಬಲ್ಲವು ಎಂದು ವಿಶ್ವ ಸಂಸ್ಥೆಯು ಹೇಳಿ 2012 ವರ್ಷವನ್ನು ಅಂತರರಾಷ್ಟ್ರೀಯ ಸಹಕಾರಿ ವರ್ಷವನ್ನಾಗಿ ಆಚರಿಸಲು ಕರೆ ನೀಡಿದರ ಪರಿಣಾಮವಾಗಿ ವಿಶ್ವದ ಎಲ್ಲೆಡೆ ಸಹಕಾರಿ ಕ್ಷೇತ್ರವನ್ನು ಬಲಪಡಿಸಲು ಅನೇಕ ರಾಷ್ಟ್ರಗಳಲ್ಲಿ ಹಲವು ಬಗೆಯ ಕಾರ್ಯಕ್ರಗಳನ್ನು ಸಹಕಾರಿ ಸಂಸ್ಥೆಗಳು ಏರ್ಪಡಿಸಿದ್ದು ಸಹಕಾರಿ ಕ್ಷೇತ್ರದ ಕಾರ್ಯಚಟುವಟಿಕೆಗಳ, ಸಾಧನೆಗಳ ಬಗ್ಗೆ ವಿಶ್ವದೆಲ್ಲೆಡೆ ವ್ಯಾಪಕ ಪ್ರಚಾರಕ್ಕೆ ಅವಕಾಶವಾಗಿದೆ.

ಅಂತರ ರಾಷ್ಟ್ರೀಯ ಸಹಕಾರಿ ಮೈತ್ರಿ ಸಂಸ್ಥೆಯವರು ಸಹಕಾರಿ ಸಂಸ್ಥೆಗಳು ಸಂಕಷ್ಟಪರಿಸ್ಥಿತಿಯಲ್ಲು ಉತ್ತಮವಾಗಿ ಕಾರ್ಯ ನಿರ್ವಹಿಸುತ್ತವೆ ಎಂಬ ವಿಶ್ವಾಸವನ್ನು ಹೊಂದಿ ವಿಶ್ವದಾದ್ಯಂತ ಈ ವ್ಯವಸ್ಥೆಯನ್ನು ಬಲಪಡಿಸಲು ಅಗತ್ಯ ಕ್ರಮವಿಡುವಂತೆ ಎಲ್ಲ ರಾಷ್ಟ್ರಗಳಿಗೆ ಕರೆ ನೀಡಿ ಈ ದಶಕವನ್ನೆ ಸಹಕಾರಿ ದಶಕವೆಂದು ಘೋಷಿಸಿದ್ದಾರೆ.

ದೇಶದಲ್ಲಿ 6 ಲಕ್ಷ ಸಹಕಾರಿ ಸಂಸ್ಥೆಗಳು 30 ಕೋಟಿ ಸದಸ್ಯರು, ಕರ್ನಾಟಕದಲ್ಲಿ 36 ಸಾವಿರ ಸಹಕಾರ ಸಂಸ್ಥೆಗಳು 2 ಕೋಟಿಗೂ ಹೆಚ್ಚು ಸದಸ್ಯರ ಬಳಗವನ್ನು ಹೊಂದಿರುವ ಈ ಚಳುವಳಿ ವಿಶ್ವದ ಅತ್ಯಂತ ದೊಡ್ಡ ಸಹಕಾರ ಚಳುವಳಿಯಾಗಿದೆ.

ಅದೇರೀತಿ ಸೌಹಾರ್ದ ಸಹಕಾರ ಚಳುವಳಿಯೂ ಕಳೆದ 14 ವರ್ಷಗಳಲ್ಲಿ 2800 ಕ್ಕೂ ಹೆಚ್ಚು ಸಹಕಾರಿ ಸಂಸ್ಥೆಗಳನ್ನು ಹೊಂದಿರುವುದು, ರಾಜ್ಯದ ಸಹಕಾರಿ ಕ್ಷೇತ್ರದ ವಿಶಿಷ್ಟ ವ್ಯವಸ್ಥೆಯಾಗಿ ದೇಶಕ್ಕೆ ಮಾದರಿಯಾಗಿ ಕಾರ್ಯನಿರ್ವಹಿಸುತ್ತಿರುವುದು ಶ್ಲಾಘನೀಯ ಪ್ರಗತಿಯನ್ನು ಸಾಧಿಸಿರುವುದು ಸ್ವಾಗತಾರ್ಹ

ಸಹಕಾರಿ ಕ್ಷೇತ್ರದಲ್ಲಿ ಸಾಧಿಸಿರುವುದು ಸಾಕಷ್ಟಿದೆ ಆದರೆ ಸಾಧಿಸಬೇಕಾದುದು ಬಹಳಷ್ಟಿದೆ. ಈ ಬಗ್ಗೆ ಸಹಕಾರಿಗಳಲ್ಲಿ ನಿರಂತರ ಅರಿವು ಮೂಡಿಸುವ ಕಾರ್ಯಕ್ರಮ – ಸಹಕಾರ ಕುರಿತು – ಸರಣಿ ಉಪನ್ಯಾಸ ಮಾಲಿಕೆ ಎಂಬುದನ್ನು ಸಂಯುಕ್ತ ಸಹಕಾರಿಯು ಪ್ರಸಕ್ತ ಸಾಲಿನಲ್ಲಿ ಪ್ರಾರಂಭಿಸಿದೆ. ರಾಜ್ಯ ಮಟ್ಟದಲ್ಲಿ, ಜಿಲ್ಲಾ ಮಟ್ಟದಲ್ಲಿ, ಹಾಗೂ ಪ್ರಾಥಮಿಕ ಹಂತದಲ್ಲಿಯೂ ವಿವಿಧ ವಿಷಯಗಳನ್ನು ಆಯ್ಕೆ ಮಾಡಿ ಉತ್ತಮ ಸಂಪನ್ಮೂಲ ವ್ಯಕ್ತಿಗಳಿಂದ ಉಪನ್ಯಾಸ ಮಾಡಿಸುವುದಾಗಿದೆ. ಇದೊಂದು ನಿರಂತರ ನಡೆಯುವ ತರಬೇತಿ ಕಾರ್ಯಕ್ರಮ. ಇದನ್ನು ತಾವುಗಳು ಸ್ವಾಗತಿಸುವುದಾಗಿ ಸಂಯುಕ್ತ ಸಹಕಾರಿಯು ಅಪೇಕ್ಷಿಸಿದೆ.

ಈಗಾಗಲೇ ಮೇ 2014 ರಲ್ಲಿ ಹಲವು ಉಪನ್ಯಾಸಗಳನ್ನು ಯಶಸ್ವಿಯಾಗಿ ನಡೆಸಿದೆ. ಸಹಕಾರಿಗಳ ಸ್ಪಂದನೆ ಸ್ವಾಗತಾರ್ಹವಾಗಿದೆ. ಈ ಕಾರ್ಯಕ್ರಮದ ಸಂಪೂರ್ಣ ವೆಚ್ಚವನ್ನು ಸಂಯುಕ್ತ ಸಹಕಾರಿಯು ಭರಿಸುತ್ತದೆ. ಎಲ್ಲ ವ್ಯವಸ್ಥೆಗಳನ್ನು ಸಂಯುಕ್ತ ಸಹಕಾರಿಯು ನಿರ್ವಹಿಸುತ್ತದೆ.

ಮುಂಬರುವ ದಿನಗಳಲ್ಲಿ ರಾಜ್ಯದ ಎಲ್ಲ ಸಹಕಾರಿ ಸಂಸ್ಥೆಗಳು ಈ ಕಾರ್ಯಕ್ರಮದ ಸದುಪಯೋಗವನ್ನು ಮಾಡಿಕೊಳ್ಳಬೇಕೆಂದು ಸಂಯುಕ್ತ ಸಹಕಾರಿಯು ಅಪೇಕ್ಷಿಸುತ್ತದೆ. ಸ್ಥಳೀಯವಾಗಿ ಸಹಕಾರಿ ಸಂಸ್ಥೆಗಳಿಗೆ ಉಪಯೋಗವಾಗಬಹುದಾದ ಹಾಗೂ ಆಯ್ಕೆ ಮಾಡಿಕೊಳ್ಳಬಹುದಾದ ವಿಷಯಗಳು ಅಳವಡಿಸಬಹುದಾದ ಸಂಪನ್ಮೂಲ ವ್ಯಕ್ತಿಗಳ ಬಗ್ಗೆ ತಮ್ಮ ಅಭಿಪ್ರಾಯಗಳನ್ನು ಸಂಯುಕ್ತ ಸಹಕಾರಿಯು ಸ್ವಾಗತಿಸುತ್ತದೆ.

## ಸಂಯುಕ್ತ ಸಹಕಾರಿಯ 13ನೇ ವಾರ್ಷಿಕ ಸಾಮಾನ್ಯ ಸಭೆ

ಸಂಯುಕ್ತ ಸಹಕಾರಿಯ 13ನೇ ವಾರ್ಷಿಕ ಸಾಮಾನ್ಯ ಸಭೆಯನ್ನು ದಿನಾಂಕ : 11–7–2014 ರಂದು ಬೆಂಗಳೂರು ಮೈಸೂರು ಬ್ಯಾಂಕ್ ವೃತ್ತದ ಹತ್ತಿರವಿರುವ ಸೆಂಟ್ರಲ್ ಕಾಲೇಜ್ ಆವರಣದಲ್ಲಿರುವ ಜ್ಞಾನಜ್ಯೋತಿ ಸಭಾಂಗಣದಲ್ಲಿ ಬೆಳಗ್ಗೆ 11–00 ಘಂಟೆಗೆ ನಡೆಸಲಾಗುವುದು. ರಾಜ್ಯದ ಎಲ್ಲ ಸೌಹಾರ್ದ ಸಹಕಾರಿಗಳು ಈ ವಿಷಯವನ್ನು ಗಮನಿಸಲು ಕೋರಿದೆ.

## ಷೇರು ಹಣ ಸಂಗ್ರಹಣೆ ಅನುಮತಿ ವಾಪಸ್

ಉದ್ದೇಶಿತ ಜೀವನ ಪ್ರಗತಿ ಸೌಹಾರ್ದ ಕ್ರೆಡಿಟ್ ಕೋ–ಆಪರೇಟಿವ್ ಲಿ. ಹರಿಹರ ಇದಕ್ಕೆ ಷೇರು ಹಣ ಸಂಗ್ರಹಣೆಗಾಗಿ ನೀಡಿದ ಅನುಮತಿಯನ್ನು ನಿಬಂಧಕರ ಕಚೇರಿ ಪತ್ರ ಸಂ.ಆರ್.ಎಸ್.ಆರ್./ಸೌಹಾರ್ದ ನೊಂದಣೆ/50/2013–14 ದಿನಾಂಕ : 16/5/2014 ರಂತೆ. ಹಿಂಪಡೆಯಲಾಗಿದೆ ಎಂದು ನಿಬಂಧಕರ ಕಚೇರಿಯ ಪತ್ರದಲ್ಲಿ ತಿಳಿಸಲಾಗಿದೆ.

### ಸೌಹಾರ್ದ ಸಹಕಾರಿಗಳ ನಿರ್ದೇಶಕರ ಆಡಳಿತ ಪರಿಣಿತಿ ಅಭಿವೃದ್ಧಿ ತರಬೇತಿ ಶಿಬಿರ

# ಮಾನವೀಯ ಮೌಲ್ಯಗಳ ಕಲ್ಪನೆಗಳ ಸಾಕಾರಕ್ಕೆ ಸದೃಢವಾದ ಭೂಮಿಕೆ ಈ ಸಹಕಾರ ಕ್ಷೇತ್ರ - ಡಾ.ಸಿ.ಸೋಮಶೇಖರ್



ದಿನಾಂಕ : 20, 21 ಮೇ 2014 ಹಾಗೂ ದಿನಾಂಕ : 30,31 ಮೇ 2014 ಬೆಂಗಳೂರಿನ ಪದ್ಮನಾಭನಗರದಲ್ಲಿರುವ ಪ್ರಾದೇಶಿಕ ಸಹಕಾರ ಆಡಳಿತ ನಿರ್ವಹಣಾ ಸಂಸ್ಥೆಯ ಸಭಾಂಗಣದಲ್ಲಿ ಸೌಹಾರ್ದ ಸಹಕಾರಿಗಳ ನಿರ್ದೇಶಕರುಗಳಿಗಾಗಿ 2 ದಿನಗಳ ಆಡಳಿತ ಪರಿಣಿತಿ ಅಭಿವೃದ್ಧಿ ತರಬೇತಿ ಶಿಬಿರಗಳನ್ನು ನಡೆಸಲಾಯಿತು.

**ಬೆಂಗಳೂರು** : ಸಹಕಾರ ಕ್ಷೇತ್ರ ಮಾನವೀಯ ಮೌಲ್ಯಗಳ ಕಲ್ಪನೆಯಿಂದ ಕೂಡಿದೆ. ಸಹಕಾರ ಕುಲದ ಯಶಸ್ಸು ಮಾನವ ಕುಲದ ಯಶಸ್ಸಾಗಿದೆ. ಆದ್ದರಿಂದ ಸಹಕಾರ ಕ್ಷೇತ್ರ ಬಲವಾಗಿ, ಸದೃಢವಾಗಿ ಬೆಳೆಯುವುದರ ಜೊತೆಗೆ ಪರಿಣಾಮಕಾರಿಯಾಗಿ ಕಾರ್ಯನಿರ್ವಹಿಸ ಬೇಕಾದ ಅಗತ್ಯವಿದೆ ಎಂದು ಸಹಕಾರ ಇಲಾಖೆಯ ಕಾರ್ಯದರ್ಶಿಗಳಾದ ಡಾ. ಸಿ.ಸೋಮಶೇಖರರವರು ತಿಳಿಸಿದರು.

ಬೆಂಗಳೂರಿನ ಪದ್ಮನಾಭನಗರದಲ್ಲಿರುವ ಪ್ರಾದೇಶಿಕ ಸಹಕಾರ ಆಡಳಿತ ನಿರ್ವಹಣಾ ಸಂಸ್ಥೆಯ ಸಭಾಂಗಣದಲ್ಲಿ ಸೌಹಾರ್ದ ಸಹಕಾರಿಗಳ ನಿರ್ದೇಶಕರುಗಳಿಗಾಗಿ ದಿನಾಂಕ : 20, 21 ರಂದು ಹಮ್ಮಿಕೊಂಡಿದ್ದ 2 ದಿನಗಳ ಆಡಳಿತ ಪರಿಣಿತಿ ಅಭಿವೃದ್ಧಿ ತರಬೇತಿಯ ಮೊದಲನೇ ದಿನದ ಶಿಬಿರವನ್ನು ಉದ್ಘಾಟಿಸಿ ಅವರು ಮಾತನಾಡಿದರು.

ರಾಜ್ಯದ ಸೌಹಾರ್ದ ಸಹಕಾರಿ ಕ್ಷೇತ್ರವೊಂದು ಹೊಸ ಪ್ರಯೋಗ, ಕಾರ್ಯನಿರ್ವಹಣೆಯ ಸಮಯದಲ್ಲಿ ಅನೇಕ ತೊಡಕುಗಳು ಎದುರಾಗುತ್ತವೆ. ಎಲ್ಲಾ ಸಮಸ್ಯೆಗಳನ್ನು ಎದುರಿಸುವ ಶಕ್ತಿ ಸಾಮರ್ಥ್ಯವನ್ನು ಸೌಹಾರ್ದ ಸಹಕಾರಿಗಳ ನಿರ್ದೇಶಕರುಗಳು ಹೊಂದಬೇಕಾಗುತ್ತದೆ. ಆಡಳಿತದಲ್ಲಿ ವೃತ್ತಿಪರತೆ, ಪಾರದರ್ಶಕತೆ ಆಧುನಿಕತೆ ಹಾಗೂ ಉತ್ತಮ ಜ್ಞಾನ ಅಗತ್ಯವಿದ್ದು, ಪ್ರಚಲಿತ ಪೈಪೋಟಿಯನ್ನು ಸಹಕಾರಿ ಸಂಸ್ಥೆಗಳು ಸಮರ್ಥವಾಗಿ ಎದುರಿಸಬೇಕಿದೆ. ಅದಕ್ಕಾಗಿ ಇಂತಹ ತರಬೇತಿ ಕಾರ್ಯಕ್ರಮವನ್ನು ಸಂಯುಕ್ತ ಸಹಕಾರಿಯವರು ವ್ಯವಸ್ಥೆ ಮಾಡಿದ್ದಾರೆ. ಉತ್ತಮ ಪರಿಸರದಲ್ಲಿ ಏರ್ಪಡಿಸಿರುವ ಈ ತರಬೇತಿ ಉತ್ತಮವಾಗಿ ನಡೆಯಲಿ ಇದರಿಂದ ಎಲ್ಲರಿಗೂ ಪ್ರಯೋಜನವಾಗಲಿ ಎಂದು ಅವರು ಶುಭಹಾರೈಸಿದರು.



# ಸಹಕಾರಿಗಳ ನಿರ್ದೇಶಕರು ಸಹಕಾರಿಯ ಟ್ರಸ್ಟಿಯಂತೆ ಕಾರ್ಯನಿರ್ವಹಿಸಬೇಕು - ಗುರುನಾಥ ಜ್ಯಾಂತಿಕರ



ಪ್ರತಿನಿಧಿಗಳ ಪರಿಚಯ



ಸಂವಾದದ ಸಂಪನ್ಮೂಲ ವ್ಯಕ್ತಿಗಳು

ಸೌಹಾರ್ದ ಸಹಕಾರಿ ಸಂಸ್ಥೆಗಳು ರಾಜ್ಯದಲ್ಲಿ ಉತ್ತಮವಾಗಿ ಕಾರ್ಯನಿರ್ವಹಿಸಬೇಕಾದರೆ ಸಹಕಾರಿಗಳ ನಿರ್ದೇಶಕರುಗಳು ಸಹಕಾರಿಯ ಕಾರ್ಯಚಟುವಟಿಕೆಗಳ ಬಗ್ಗೆ ಸಂಪೂರ್ಣ ಜ್ಞಾನವನ್ನು ಹೊಂದಿರಬೇಕು ಎಂದು ಸೌಹಾರ್ದ ಸಂಯುಕ್ತ ಸಹಕಾರಿ ಅಧ್ಯಕ್ಷ ಶ್ರೀ ಗುರುನಾಥ ಜ್ಯಾಂತಿಕರ ತಿಳಿಸಿದರು.

ಬೆಂಗಳೂರಿನ ಪದ್ಮನಾಭನಗರದಲ್ಲಿರುವ ಪ್ರಾದೇಶಿಕ ಸಹಕಾರ ಆಡಳಿತ ನಿರ್ವಹಣಾ ಸಂಸ್ಥೆಯ ಸಭಾಂಗಣದಲ್ಲಿ ಸೌಹಾರ್ದ ಸಹಕಾರಿಗಳ ನಿರ್ದೇಶಕರುಗಳಿಗಾಗಿ ದಿನಾಂಕ : 20, 21 ರಂದು ಹಮ್ಮಿಕೊಂಡಿದ್ದ 2 ದಿನಗಳ ಆಡಳಿತ ಪರಿಣಿತಿ ಅಭಿವೃದ್ಧಿ ತರಬೇತಿ ಶಿಬಿರದ ಅಧ್ಯಕ್ಷತೆ ವಹಿಸಿ ಅವರು ಮಾತನಾಡಿದರು.

ವಿಶೇಷವಾಗಿ ಸಂಪನ್ಮೂಲಗಳ ಸಂಗ್ರಹಣೆ, ಲಾಭದಾಯಕ ಹೂಡಿಕೆ, ವ್ಯವಹಾರ ಚಾಣಾಕ್ಷತೆ, ಸಹಕಾರಿಯಲ್ಲಿ ಲೆಕ್ಕ ಪತ್ರಗಳ ವ್ಯವಸ್ಥೆ, ವೃತ್ತಿಪರ ಆಡಳಿತ, ಲೆಕ್ಕ ಪರಿಶೋಧನೆ, ಸಭೆಗಳ ನಿರ್ವಹಣೆ, ಸಹಕಾರಿಯು ಯಾರೊಂದಿಗೆ ಹೇಗೆ ವ್ಯವಹರಿಸಬೇಕು, ಸಾಲಗಳನ್ನು ನೀಡುವಾಗ ಅನುಸರಿಸಬಹುದಾದ ಕ್ರಮಗಳು ಮತ್ತು ಸಹಕಾರಿಗೆ ಸಂಬಂಧಿಸಿದ ಮಾಹಿತಿಗಳನ್ನು ಯಾರ್‍ಯಾರಿಗೆ ಯಾವಾಗ ಕಳುಹಿಸಲಾಗುತ್ತದೆ ಇತ್ಯಾದಿ ಎಲ್ಲ ವಿಷಯಗಳ ಬಗ್ಗೆ ತಿಳಿದುಕೊಳ್ಳುವುದು ಅಗತ್ಯ ಎಂದು ಅವರು ವಿವರಿಸಿದರು.

ಸಂಯುಕ್ತ ಸಹಕಾರಿಯು ಹಲವು ವಿಧವಾದ ತರಬೇತಿಗಳನ್ನು ರಾಜ್ಯದ ಎಲ್ಲಾ ಭಾಗಗಳಲ್ಲಿ ಪ್ರತಿವರ್ಷವೂ ನಡೆಸುತ್ತಾ ಬಂದಿದೆ. ಕಳೆದ 3 ವರ್ಷಗಳಿಂದ ನಿರ್ದೇಶಕರುಗಳಿಗಾಗಿಯೇ ಬೆಂಗಳೂರಿನಲ್ಲಿ ಆಡಳಿತ ಪರಿಣಿತಿ ಅಭಿವೃದ್ಧಿ ತರಬೇತಿ ನಡೆಸುತ್ತಾ ಬಂದಿದ್ದು, ರಾಜ್ಯದ ಸೌಹಾರ್ದ ಸಹಕಾರಿಗಳಿಂದ ಉತ್ತಮ ಪ್ರತಿಕ್ರಿಯೆ ಬರುತ್ತಿರುವುದು ಸಂತೋಷದ ವಿಷಯ ಎಂದು ತಿಳಿಸಿದರು.

ಕಾರ್ಯಕ್ರಮದಲ್ಲಿ ಮುಖ್ಯ ಅತಿಥಿಗಳಾಗಿ ಭಾಗವಹಿಸಿ ಮಾತನಾಡಿದ ಸಂಯುಕ್ತ ಸಹಕಾರಿಯ ನಿರ್ದೇಶಕ ಶ್ರೀ ಎಸ್. ಆರ್.ಸತೀಶಚಂದ್ರರವರು, ಸೌಹಾರ್ದ ಸಹಕಾರಿ ಕ್ಷೇತ್ರದ ಅಭಿವೃದ್ಧಿಗೆ ತರಬೇತಿ ಕಾರ್ಯಕ್ರಮಗಳು ತುಂಬ ಪ್ರಯೋಜನಕಾರಿಯಾಗಿವೆ ಎಂದರು. ಸಂಯುಕ್ತ ಸಹಕಾರಿಯ ನಿರ್ದೇಶಕ ಶ್ರೀ ಬಿ.ಹೆಚ್. ಕೃಷ್ಣಾರೆಡ್ಡಿಯವರು ಮಾತನಾಡಿ, ಸಂಯುಕ್ತ ಸಹಕಾರಿಯು ರಾಜ್ಯದ ಸೌಹಾರ್ದ ಕ್ಷೇತ್ರದ ಬೆಳವಣಿಗೆಗೆ ಪೂರಕವಾಗುವ ಎಲ್ಲಾ ಕಾರ್ಯಗಳನ್ನು ಯಶಸ್ವಿಯಾಗಿ ನಿರ್ವಹಿಸುತ್ತಿದೆ ಎಂದು ತಿಳಿಸಿದರು.

ಪ್ರಾದೇಶಿಕ ಸಹಕಾರ ಆಡಳಿತ ನಿರ್ವಹಣಾ ಸಂಸ್ಥೆಯ ಪ್ರಾದೇಶಿಕ ನಿರ್ದೇಶಕ ಶ್ರೀ ಬಿ.ವಸಂತ ನಾಯಕರವರು ಮಾತನಾಡಿ, ಸಹಕಾರ ವ್ಯವಸ್ಥೆ ಈ ದೇಶದ ಅರ್ಥವ್ಯವಸ್ಥೆಯಲ್ಲಿ ಮಹತ್ವದ ಕೊಡುಗೆಯನ್ನು ನೀಡುತ್ತ ಬಂದಿದೆ. ಸಮಾಜದಲ್ಲಿ ವಿಶೇಷವಾಗಿ ಹಿಂದುಳಿದ ವರ್ಗಗಳ ಅಭಿವೃದ್ಧಿಗೆ ಅನೇಕ ಯೋಜನೆಗಳ ಮುಖಾಂತರ ಆರ್ಥಿಕ ನೆರವನ್ನು ನೀಡುವುದರ ಜೊತೆಗೆ ಸಾಮಾಜಿಕ ಸ್ಥಾನಮಾನಗಳನ್ನು ನೀಡಿ ಅವರ ಸರ್ವಾಂಗೀಣ ಅಭಿವೃದ್ಧಿಗೆ ಕಾರಣವಾಗಿದೆ ಎಂದರು.

ಪ್ರಾರಂಭದಲ್ಲಿ ಸಂಯುಕ್ತ ಸಹಕಾರಿಯ ವ್ಯವಸ್ಥಾಪಕ ನಿರ್ದೇಶಕ ಶ್ರೀ ಶರಣಗೌಡ ಪಾಟೀಲರವರು ಗಣ್ಯರನ್ನು ಸ್ವಾಗತಿಸಿ ಕಾರ್ಯಕ್ರಮದ ಪ್ರಾಸ್ತಾವಿಕ ಭಾಷಣ ಮಾಡಿದರು.

ಕಾರ್ಯಕ್ರಮದಲ್ಲಿ ಡಾ. ಎಸ್.ಎ.ಸಿದ್ಧಾಂತಿಯವರು ಸಹಕಾರ ಕ್ಷೇತ್ರದ ಪ್ರಚಲಿತ ಬೆಳವಣಿಗೆಗಳು, ವಿಶ್ವದ ವಿವಿಧ ದೇಶಗಳ ಸಹಕಾರ ಚಳುವಳಿಯ ಪ್ರಗತಿ ಶ್ರೀ ಸಿ.ಎನ್.ಪರಶಿವಮೂರ್ತಿಯವರು ಸಹಕಾರ ಚಳುವಳಿ ನಡೆದುಬಂದ ದಾರಿ, ಸೌಹಾರ್ದ ಸಹಕಾರಿ ಕಾಯ್ದೆಯ ಮುಖ್ಯಾಂಶಗಳು ನಿರ್ದೇಶಕರ ಕರ್ತವ್ಯ ಹಾಗೂ ಜವಾಬ್ದಾರಿಗಳು, ಶ್ರೀ ಬಿ.ಎ.ಮಹದೇವಪ್ಪನವರು ಆಂತರಿಕ ಸಂಬಂಧಗಳ ನಿರ್ವಹಣೆ, ಶ್ರೀ ವೈ.ವಿ.ಗುಂಡೂರಾವರವರು ಸಕಾರಾತ್ಮಕ ಚಿಂತನೆಗಳು, ಶ್ರೀ ಸುಭಾಷ ಹೆಗಡೆಯವರು ಟೀಮ ಬಿಲ್ಡಿಂಗ, ಪರಿಣಾಮಕಾರಿ ಸಂವಹನಗಳ ಬಗ್ಗೆ ಉಪನ್ಯಾಸಗಳನ್ನು ನೀಡಿದರು.

**"ಸಹಕಾರ ಅಭಿವೃದ್ಧಿಯ ನಡೆ" ನೂತನ ಕಾರ್ಯಕ್ರಮ :** ಸಹಕಾರ ಚಳುವಳಿಯ ಕುರಿತು ಸಂವಾದರೂಪದ ಚಿಂತನ ಮಂಥನ ಕಾರ್ಯಕ್ರಮದ ಅಧ್ಯಕ್ಷತೆಯನ್ನು ಸಂಯುಕ್ತ ಸಹಕಾರಿಯ ಅಧ್ಯಕ್ಷರು ವಹಿಸಿದ್ದರು. ಸಂಪನ್ಮೂಲ ವ್ಯಕ್ತಿಗಳಾಗಿ ಆರ್.ಐ.ಸಿ.ಎಮ್.ನ ಪ್ರಾದೇಶಿಕ ನಿರ್ದೇಶಕ ಶ್ರೀ ಬಿ.ವಸಂತ ನಾಯಕ, ಬೆಂಗಳೂರು

ಪತ್ರಕರ್ತರ ಸಹಕಾರ ಸಂಘದ ಅಧ್ಯಕ್ಷ ಶ್ರೀ ಜಯರಾಮ ಅಡಿಗ, ಸಹಕಾರ ಇಲಾಖೆಯ ಜಂಟಿನಿಬಂಧಕರಾದ ಶ್ರೀ ಪಿ.ಆರ್.ಪಳಂಗಪ್ಪ ರವರು ಭಾಗವಹಿಸಿದ್ದರು. ಸಹಕಾರ ವಾರ ಪತ್ರಿಕೆಯ ಸಲಹೆಗಾರ ಶ್ರೀ ಪಿ.ರುದ್ರಪ್ಪನವರು ಸಂವಾದ ನಿರೂಪಣೆ ಮಾಡಿದರು.

ಕಾರ್ಯಕ್ರಮ ಬಹಳ ಒಳ್ಳೆಯದಾಗಿತ್ತೆಂದು ಪ್ರತಿನಿಧಿಗಳು ಅಭಿಪ್ರಾಯಗಳನ್ನು ವ್ಯಕ್ತಪಡಿಸಿದರು. ನಂತರ ಸಂಯುಕ್ತ ಸಹಕಾರಿಯ ಅಧ್ಯಕ್ಷ ಶ್ರೀ ಗುರುನಾಥ ಜ್ಯಾಂತಿಕರರವರು ಪ್ರತಿನಿಧಿಗಳ ಪ್ರಶ್ನೆಗಳಿಗೆ ಸ್ಪಂದಿಸಿ ಸಮಾರೋಪ ಭಾಷಣವನ್ನು ಮಾಡಿದರು. ಕಾರ್ಯಕ್ರಮದಲ್ಲಿ ರಾಜ್ಯದ 38 ಸೌಹಾರ್ದ ಸಹಕಾರಿಗಳಿಂದ 68 ಪ್ರತಿನಿಧಿಗಳು ಭಾಗವಹಿಸಿದ್ದರು.

## ತರಬೇತಿಯಿಂದ ಸಹಕಾರಿಗಳ ಅಭಿವೃದ್ಧಿ ಸಾಧ್ಯ – ಶ್ರೀ ಹೆಚ್.ಎಸ್.ನಾಗರಾಜಯ್ಯ

ದಿನಾಂಕ : 30, 31 ಮೇ 2014 ರಂದು ನಡೆಸಿದ ಕಾರ್ಯಕ್ರಮವನ್ನು ದಿನಾಂಕ 30–5–2014 ರಂದು ಸಹಕಾರ ಸಂಘಗಳ ಅಪರ ನಿಬಂಧಕರಾದ ಶ್ರೀ ಹೆಚ್.ಎಸ್.ನಾಗರಾಜಯ್ಯನವರು ದೀಪ ಬೆಳಗಿಸಿ ಕಾರ್ಯಕ್ರಮ ಉದ್ಘಾಟಿಸಿ ಸಂಯುಕ್ತ ಸಹಕಾರಿಯು ರಾಜ್ಯದ ಸೌಹಾರ್ದ ಸಹಕಾರಿಗಳ ಅಭಿವೃದ್ಧಿಗಾಗಿ ನಿರಂತರ ಹಾಗೂ ಒಳ್ಳೆಯ ಗುಣಮಟ್ಟದ ತರಬೇತಿ ಕಾರ್ಯಕ್ರಮಗಳನ್ನು ಹಮ್ಮಿಕೊಳ್ಳುತ್ತಿರುವುದು ಶ್ಲಾಘನೀಯ. ಅದರಲ್ಲೂ ಸಹಕಾರಿ ಸಂಸ್ಥೆಗಳ ನಿರ್ದೇಶಕರುಗಳಿಗಾಗಿ ತರಬೇತಿ ಕಾರ್ಯಕ್ರಮ ಅವಶ್ಯಕವಾಗಿರುವುದನ್ನು ಗಮನಿಸಿದೆ. ತರಬೇತಿ ಸಹಕಾರಿಗಳ ಅಭಿವೃದ್ಧಿಗೆ ಪೂರಕವಾಗಿದೆ ಎಂದು ತಿಳಿಸಿದರು.



## ಸಹಕಾರಿಗಳ ಅಭಿವೃದ್ಧಿಯಲ್ಲಿ ನಿರ್ದೇಶಕರ ಪಾತ್ರ ಮಹತ್ವದ್ದು–ಶ್ರೀ ಹೆಚ್.ವಿ.ರಾಜೀವ

ಕಾರ್ಯಕ್ರಮದ ಅಧ್ಯಕ್ಷತೆಯನ್ನು ಸಂಯುಕ್ತ ಸಹಕಾರಿ ಉಪಾಧ್ಯಕ್ಷ ಶ್ರೀ ಹೆಚ್.ವಿ.ರಾಜೀವರವರು ವಹಿಸಿ ಮಾತನಾಡುತ್ತ ಸಹಕಾರಿ ಕ್ಷೇತ್ರದ ಅಭಿವೃದ್ಧಿಗೆ ಶಿಕ್ಷಣ ಹಾಗೂ ತರಬೇತಿಯು ಅತ್ಯಂತ ಪ್ರಮುಖವಾದದ್ದು. ಸಹಕಾರಿಯ ನಿರ್ದೇಶಕರುಗಳಿಗೆ ಸಹಕಾರಿಯ ಹಾಗೂ ಸಹಕಾರಿ ಕ್ಷೇತ್ರದ ಕಾರ್ಯಚಟುವಟಿಕೆಗಳ ಬಗ್ಗೆ ಜ್ಞಾನ ಸಂಪಾದನೆ ಅತ್ಯವಶ್ಯಕ ಎಂದು ತಿಳಿಸುತ್ತಾ ರಾಜ್ಯದಲ್ಲಿ ಸೌಹಾರ್ದ ಸಹಕಾರಿ ಚಳುವಳಿ ವೇಗದಲ್ಲಿ ಬೆಳೆಯುತ್ತಿದೆ. ಈ ಬೆಳವಣಿಗೆ ಗುಣಮಟ್ಟದ್ದಾಗಿರಬೇಕು ಸೌಹಾರ್ದ ಸಹಕಾರಿಗಳ ನಿರ್ದೇಶಕರು ಸಂಯುಕ್ತ ಸಹಕಾರಿಯು ಏರ್ಪಡಿಸಿರುವ ಇಂತಹ ತರಬೇತಿ ಕಾರ್ಯಕ್ರಮಗಳಲ್ಲಿ ಸಕ್ರಿಯವಾಗಿ ಭಾಗವಹಿಸಿ ಸಹಕಾರ ಕ್ಷೇತ್ರದ ಅಭಿವೃದ್ಧಿಯಲ್ಲಿ ಮಹತ್ವದ ಪಾತ್ರ ನಿರ್ವಹಿಸಬೇಕು. ಎಂದು ತಿಳಿಸಿದರು.

ಮುಖ್ಯ ಅತಿಥಿಗಳಾಗಿ ಪ್ರಾದೇಶಿಕ ಸಹಕಾರ ಆಡಳಿತ ನಿರ್ವಹಣಾ ಸಂಸ್ಥೆಯ ಪ್ರಾದೇಶಿಕ ನಿರ್ದೇಶಕ ಶ್ರೀ ಬಿ. ವಸಂತ ನಾಯಕ, ಶ್ರೀ ಬಿ.ಹೆಚ್. ಕೃಷ್ಣಾರೆಡ್ಡಿ ಅವರು ಮಾತನಾಡಿ, ತರಬೇತಿಯಿಂದ ಇನ್ನೂ ಹೆಚ್ಚಿನ ಪ್ರಗತಿ ಸಾಧಿಸಲು ಸಾಧ್ಯ ದೇಶದಲ್ಲಿ ಇದೊಂದು ಮಾದರಿ ಕ್ಷೇತ್ರವಾಗಿ ಕಾರ್ಯನಿರ್ವಹಿಸಲಿ ಎಂದು ಶುಭ ಹಾರೈಸಿದರು. ಸಂಯುಕ್ತ ಸಹಕಾರಿಯ ನಿರ್ದೇಶಕರಾದ ಶ್ರೀ ನಾಗೇಂದ್ರ ಗುಪ್ತರವರು ಉಪಸ್ಥಿತರಿದ್ದರು.

ನಂತರ ಶ್ರೀ ಹೆಚ್.ಎಸ್.ನಾಗರಾಜಯ್ಯನವರು ಸಹಕಾರ ಕ್ಷೇತ್ರದ ಪ್ರಚಲಿತ ಬೆಳವಣಿಗೆಗಳು, ವಿಶ್ವದ ವಿವಿಧ ದೇಶಗಳ ಸಹಕಾರ ಚಳುವಳಿಯ ಪ್ರಗತಿ ಉಪನ್ಯಾಸ ನೀಡಿದರು.

ಶ್ರೀ ಸಿ.ಎನ್.ಪರಶಿವಮೂರ್ತಿಯವರು ಸಹಕಾರ ಚಳುವಳಿ ನಡೆದುಬಂದ ದಾರಿ, ಸೌಹಾರ್ದ ಸಹಕಾರಿ ಕಾಯ್ದೆಯ ಮುಖ್ಯಾಂಶ ಗಳು ನಿರ್ದೇಶಕರ ಕರ್ತವ್ಯ ಹಾಗೂ ಜವಾಬ್ದಾರಿಗಳು, ಶ್ರೀ ಬಿ.ಎ.ಮಹದೇವಪ್ಪನವರು ಆಂತರಿಕ ಸಂಬಂಧಗಳ ನಿರ್ವಹಣೆ, ಶ್ರೀ ವೈ.ವಿ.ಗುಂಡೂರಾವ್‌ರವರು ಸಕಾರಾತ್ಮಕ ಚಿಂತನೆಗಳು, ಡಾ.ನಂದೀಶ ಹಿರೇಮಠರವರು ಗ್ರಾಹಕ ಸಂಬಂಧಗಳ ನಿರ್ವಹಣೆ ಬಗ್ಗೆ ಉಪನ್ಯಾಸಗಳನ್ನು ನೀಡಿದರು.

**"ಸಹಕಾರ ಅಭಿವೃದ್ಧಿಯ ನಡೆ" ನೂತನ ಕಾರ್ಯಕ್ರಮ :** ತರಬೇತಿಯಲ್ಲಿ ಭಾಗವಹಿಸಿದ ಪ್ರತಿನಿಧಿಗಳಿಂದ ಸಹಕಾರ ಚಳುವಳಿಯ ಸ್ವಾಟ್ ಅನಲಿಸಿಸ್ ಕಾರ್ಯಕ್ರಮ ನಡೆಸಲಾಯಿತು. ನಂತರ ಡಾ.ಎಸ್.ಎ.ಸಿದ್ಧಾಂತಿಯವರು ಪ್ರತಿನಿಧಿಗಳು ಪ್ರಸ್ತುತ ಪಡಿಸಿದ ವಿವರಗಳನ್ನು ಕ್ರೋಢೀಕರಿಸಿ ಸಹಕಾರ ಚಳುವಳಿಯ ಸ್ವಾಟ್ ಅನಲಿಸಿಸ್ ನಿರ್ವಹಣೆ ಮಾಡಿದರು. ಇದೊಂದು ಉತ್ತಮ ಹಾಗೂ ವಿಭಿನ್ನ ಕಾರ್ಯಕ್ರಮವೆಂದು ಗಣ್ಯರು ಹಾಗೂ ಪ್ರತಿನಿಧಿಗಳು ಅಭಿಪ್ರಾಯ ವ್ಯಕ್ತಪಡಿಸಿದರು.

# ಸಂಯುಕ್ತ ಸಹಕಾರಿಯ ಬೆಳಗಾವಿ ವಿಭಾಗದಲ್ಲಿ ಸರಣಿ ಉಪನ್ಯಾಸ ಮಾಲಿಕೆ

ಬೆಳಗಾವಿ ವಿಭಾಗದಲ್ಲಿ ದಿನಾಂಕ : 17.05.2014 ರಂದು ಗೋಕಾಕ್‌ದಲ್ಲಿ ಹೊಸದಾಗಿ ನೋಂದಣಿಯಾದ ಸೌಹಾರ್ದ ಸಹಕಾರಿಗಳಿಗಾಗಿ ಪ್ರವೇಶ ತರಬೇತಿ ಹಾಗೂ ಸಹಕಾರ ಕ್ಷೇತ್ರದ ಅಭಿವೃದ್ಧಿಗಾಗಿ ಎಲ್ಲಾ ಸಹಕಾರ ಸಂಸ್ಥೆಗಳ ಪ್ರಯೋಜನಕ್ಕಾಗಿ ಸರಣಿ ಉಪನ್ಯಾಸ ಮಾಲಿಕೆ ಕಾರ್ಯಕ್ರಮಗಳನ್ನು ನಡೆಸಲಾಯಿತು. ದಿನಾಂಕ : 26.05.2014ರಂದು ಬೆಳಗಾವಿ ಉಪ ವಿಭಾಗದಲ್ಲಿ ಹೊಸದಾಗಿ ನೋಂದಣಿಯಾದ ಸೌಹಾರ್ದ ಸಹಕಾರಿಗಳಿಗಾಗಿ ಪ್ರವೇಶ ತರಬೇತಿ ಹಾಗೂ ಸಹಕಾರ ಕ್ಷೇತ್ರದ ಅಭಿವೃದ್ಧಿಗಾಗಿ ಎಲ್ಲ ಸಹಕಾರ ಸಂಸ್ಥೆಗಳ ಪ್ರಯೋಜನಕ್ಕಾಗಿ ಸರಣಿ ಉಪನ್ಯಾಸ ಮಾಲಿಕೆ ಕಾರ್ಯಕ್ರಮಗಳನ್ನು ನಡೆಸಲಾಯಿತು.

ಮೊದಲನೇ ಅವಧಿಯಲ್ಲಿ ಸಂಯುಕ್ತ ಸಹಕಾರಿ ನಿರ್ದೇಶಕರಾದ ಶ್ರೀ ಭಾಸ್ಕರ ಹೆಗಡೆ ಕಾಗೇರಿ ಹೊಸ ಸೌಹಾರ್ದ ಸಹಕಾರಿಗಳಿಗೆ "ಪ್ರವೇಶ ತರರಬೇತಿ" ಮತ್ತು ಎರಡನೇ ಅವಧಿಯಲ್ಲಿ ಶ್ರೀ ಎಸ್.ಜಿ.ಜೋಷಿ "ಸಹಕಾರಿ ಸಂಸ್ಥೆಗಳಲ್ಲಿ ಸಭೆಗಳು" (ಸರಣಿ ಉಪನ್ಯಾಸ ಮಾಲಿಕೆ 01) ಬಗ್ಗೆ ಮಾಹಿತಿಯನ್ನು ನೀಡಲು ಸಂಪನ್ಮೂಲ ವ್ಯಕ್ತಿಗಳಾಗಿ ಸಭೆಗೆ ಆಗಮಿಸಿದ್ದರು. ಸಭೆಯಲ್ಲಿ



ಮೊದಲನೇ ಅವಧಿಗೆ ಒಟ್ಟು 22 ಸೌಹಾರ್ದ ಸಹಕಾರಿಗಳಿಂದ 37 ಜನ ಅಭ್ಯರ್ಥಿಗಳು ಹಾಗೂ ಎರಡನೇ ಅವಧಿಗೆ ಮೊದಲ ಅವಧಿಯ ಅಭ್ಯರ್ಥಿಗಳು ಕೂಡಿಕೊಂಡು 39 ಸೌಹಾರ್ದ ಸಹಕಾರಿಗಳಿಂದ 56 ಅಭ್ಯರ್ಥಿಗಳು ಮತ್ತು 08 ಸಹಕಾರ ಸಂಘಗಳಿಂದ 08 ಅಭ್ಯರ್ಥಿಗಳು ತರಬೇತಿಯಲ್ಲಿ ಹಾಜರಿದ್ದರು.

# ಅಧಿಪ್ರೇರಣೆ ಮತ್ತು ಗುಣಮಟ್ಟ ನಿರ್ವಹಣೆ ತರಬೇತಿ ಕಾರ್ಯಗಾರದ ವರದಿ

ದಿನಾಂಕ : 22–05–2014 ಗುರುವಾರ ಹೆಚ್.ಕೆ.ಸಿ.ಸಿ ಸಭಾಂಗಣ, ಎಸ್.ಬಿ.ಐ. ಬ್ಯಾಂಕ್ ಮೇಲುಗಡೆ, ಸೂಪರ್ ಮಾರ್ಕೆಟ್, ಗುಲಬರ್ಗಾ ಇಲ್ಲಿ ಗುಲಬರ್ಗಾ ಮತ್ತು ಯಾದಗಿರಿ ಜಿಲ್ಲೆಗಳ ಸಹಕಾರ ಸಂಘಗಳಿಗಾಗಿ ಆಯೋಜಿಸಿದ್ದ 'ಅಧಿಪ್ರೇರಣೆ ಮತ್ತು ಗುಣಮಟ್ಟ ನಿರ್ವಹಣೆ' ತರಬೇತಿ ಕಾರ್ಯಕ್ರಮ ಮತ್ತು ಸಹಕಾರ ಕುರಿತು ಸರಣಿ ಉಪನ್ಯಾಸ ಮಾಲಿಕೆ ಕಾರ್ಯಕ್ರಮವನ್ನು ಶ್ರೀ ವಿಶ್ವನಾಥ ಮಲಕೂಡರವರು ಉದ್ಘಾಟಿಸಿ ಮಾತನಾಡಿದರು.

ಈ ಕಾರ್ಯಕ್ರಮದ ಮುಖ್ಯ ಅತಿಥಿಗಳಾಗಿ ಶ್ರೀ ವಿಶ್ವನಾಥ ಮಲಕೂಡ, ಸಹಕಾರಿಗಳ ಉಪ ನಿಬಂಧಕರು, ಗುಲಬರ್ಗಾ ಇವರು ಆಗಮಿಸಿದ್ದರು ಹಾಗೂ ಶ್ರೀ ಸಂಜೀವ ಮಹಾಜನ, ಅಧ್ಯಕ್ಷರು, ಸಿದ್ಧಿ ವಿನಾಯಕ ಸೌಹಾರ್ದ ಪತ್ತಿನ ಸಹಕಾರಿ ನಿ., ಗುಲಬರ್ಗಾ, ಶ್ರೀ ಪ್ರದೀಪ ದಾಬಶೆಟ್ಟಿ, ಅಧ್ಯಕ್ಷರು, ಕಲ್ಯಾಣ ನಾಡು ವಿವಿದೋದ್ದೇಶ ಸೌಹಾರ್ದ ಸಹಕಾರಿ ನಿ., ಗುಲಬರ್ಗಾ ಮತ್ತು ಶ್ರೀಮತಿ ಶೈಲಜಾ ತಪಲಿ, ಅಧ್ಯಕ್ಷರು, ಗುಲಬರ್ಗಾ ಮಹಿಳಾ ಪತ್ತಿನ



ಸೌಹಾರ್ದ ಸಹಕಾರಿ ನಿ., ಗುಲಬರ್ಗಾ ಇವರು ವೇದಿಕೆಯಲ್ಲಿದ್ದರು. ಈ ಕಾರ್ಯಕ್ರಮದಲ್ಲಿ ಗುಲಬರ್ಗಾ ಮತ್ತು ಯಾದಗಿರಿ ಜಿಲ್ಲೆಗಳ 18 ಸಹಕಾರ ಸಂಘಗಳಿಂದ 24 ಜನ ಪ್ರತಿನಿಧಿಗಳು ಮತ್ತು 22 ಸೌಹಾರ್ದ ಸಹಕಾರಿಗಳಿಂದ 30 ಜನ ಪ್ರತಿನಿಧಿಗಳು ಭಾಗವಹಿಸಿ ತರಬೇತಿ ಕಾರ್ಯಕ್ರಮದ ಪ್ರಯೋಜನವನ್ನು ಪಡೆದುಕೊಂಡರು.



ದಿನಾಂಕ : 26-05-2014ರಂದು ಮುಂಜಾನೆ 10:00 ಗಂಟೆಗೆ, ಕನ್ನಡ ಸಾಹಿತ್ಯ ಭವನ ಬೆಳಗಾವಿ ಸಭಾಭವನದಲ್ಲಿ "ಪ್ರವೇಶ ತರಬೇತಿ" ಕಾರ್ಯಾಗಾರ ಏರ್ಪಡಿಸಲಾಗಿತ್ತು. ತಾಲೂಕುಗಳ ಎಲ್ಲಾ 66 ಹೊಸ ಸೌಹಾರ್ದ ಸಹಕಾರಿಗಳಿಗೆ, "ಸರಣಿ ಉಪನ್ಯಾಸ ಮಾಲಿಕೆ" ಕಾರ್ಯಗಾರವನ್ನು ಏರ್ಪಡಿಸಲಾಗಿತ್ತು.

## ಜೂನ್ ಮಾಹೆಯ ತರಬೇತಿ ಕಾರ್ಯಕ್ರಮಗಳು

ಹೊಸದಾಗಿ ನೋಂದಣಿಯಾದ ಸೌಹಾರ್ದ ಸಹಕಾರಿಗಳಿಗಾಗಿ ಪ್ರವೇಶ ತರಬೇತಿ ಹಾಗೂ ಸಹಕಾರ ಕ್ಷೇತ್ರದ ಅಭಿವೃದ್ಧಿಗಾಗಿ ಎಲ್ಲ ಸಹಕಾರ ಸಂಸ್ಥೆಗಳ ಪ್ರಯೋಜನಕ್ಕಾಗಿ ಸರಣಿ ಉಪನ್ಯಾಸ ಮಾಲಿಕೆ ಕಾರ್ಯಕ್ರಮ. ಈ ಕೆಳಕಂಡ ದಿನಾಂಕಗಳಂದು ನಡೆಯಲಿದೆ.

ದಿನಾಂಕ : 03.06.2014ರಂದು ಚಿಕ್ಕೋಡಿ, ದಿನಾಂಕ : 06.06.2014 ರಂದು ಬಿಜಾಪುರ, ದಿನಾಂಕ : 04.06.2014 ಬೀದರ್, ದಿನಾಂಕ : 09.06.2014 ರಂದು ಮಂಗಳೂರು.

ಅಧಿಪ್ರೇರಣೆ ಹಾಗೂ ಗುಣಮಟ್ಟ ನಿರ್ವಹಣೆ ತರಬೇತಿ ಹಾಗೂ ಸರಣಿ ಉಪನ್ಯಾಸ ಮಾಲಿಕೆ ತರಬೇತಿ ದಿನಾಂಕ : 10.06.2014 ರಂದು ಉಡುಪಿಯಲ್ಲಿ ಏರ್ಪಡಿಸಲಾಗಿದೆ.

## ನಿರ್ದೇಶಕರಾಗಿ ಅವಿರೋಧ ಆಯ್ಕೆ



ಶ್ರೀ ಬಸವರಾಜ ಸಿದ್ದಪ್ಪ ಸುಲ್ತಾನ್‌ಪುರಿಯವರು ಬೆಳಗಾವಿಯ ಜಿಲ್ಲಾ ಸಹಕಾರಿ ಯೂನಿಯನ್ ಬೆಳಗಾವಿ ಇದರ ಆಡಳಿತ ಮಂಡಳಿಯ ಚುನಾವಣೆಯಲ್ಲಿ ಹುಕ್ಕೇರಿ ತಾಲ್ಲೂಕು ಪ್ರಾಥಮಿಕ ಕೃಷಿ ಪತ್ತಿನ ಸಂಘ ಮತ ಕ್ಷೇತ್ರದಿಂದ ಅವಿರೋಧವಾಗಿ ನಿರ್ದೇಶಕರಾಗಿ ಆಯ್ಕೆಯಾಗಿರುತ್ತಾರೆ.

## 31.03.2015ಕ್ಕೆ ಮಂಡಲಿಯ ಅವಧಿ ಪೂರ್ಣಗೊಳ್ಳುವ ಸಹಕಾರಿಗಳಿಗೆ ಸೂಚನೆ

**ದಿನಾಂಕ** : 31.03.2015ಕ್ಕೆ ಮಂಡಲಿಯ ಅವಧಿ ಕೊನೆಗೊಳ್ಳುವ ಸೌಹಾರ್ದ ಸಹಕಾರಿಗಳಿಗೆ ಸಂಬಂಧಪಟ್ಟಂತೆ ಸಹಕಾರ ಚುನಾವಣಾ ಆಯೋಗವು ದಿನಾಂಕ : 04.06.2014ರಂದು ಸುತ್ತೋಲೆ ನೀಡಿದ್ದು, ಸಂಬಂಧಿಸಿದ ಎಲ್ಲಾ ಸಹಕಾರಿಗಳು ಅದನ್ನು ಗಮನಿಸಿ ಅದರಂತೆ ಕ್ರಮವಿಡಲು ಸೂಚಿಸಿದೆ. ಸುತ್ತೋಲೆಯ ಪ್ರತಿ ಸಂಯುಕ್ತ ಸಹಕಾರಿಯ ವೆಬ್‌ಸೈಟ್‌ನಲ್ಲಿ (www.souharda.coop) ಲಭ್ಯವಿದೆ.

## ರಾಜ್ಯ ಸೌಹಾರ್ದ ಸಂಯುಕ್ತ ಸಹಕಾರಿಯು ರಾಜ್ಯದ ಸೌಹಾರ್ದ ಸಹಕಾರಿಗಳ ಪದಾಧಿಕಾರಿಗಳು, ನಿರ್ದೇಶಕರು ಹಾಗೂ ಅಧಿಕಾರಿಗಳಿಗಾಗಿ ಅಂತರ ರಾಜ್ಯ ಪ್ರವಾಸ

ರಾಜ್ಯದ ಅನೇಕ ಸೌಹಾರ್ದ ಸಹಕಾರಿಗಳ ಕೋರಿಕೆಯ ಮೇರೆಗೆ ಕರ್ನಾಟಕ ರಾಜ್ಯ ಸೌಹಾರ್ದ ಸಂಯುಕ್ತ ಸಹಕಾರಿಯು ರಾಜ್ಯದ ಸೌಹಾರ್ದ ಸಹಕಾರಿಗಳ ಪದಾಧಿಕಾರಿಗಳು, ನಿರ್ದೇಶಕರು ಹಾಗೂ ಅಧಿಕಾರಿಗಳಿಗಾಗಿ ಅಂತರ ರಾಜ್ಯ ಪ್ರವಾಸ ಕಾರ್ಯಕ್ರಮಗಳನ್ನು ವ್ಯವಸ್ಥೆಮಾಡಲು ತೀರ್ಮಾನಿಸಿದೆ. ಪ್ರಾಯೋಗಿಕವಾಗಿ ಒಂದನೆ ತಂಡದ ಕಾರ್ಯಕ್ರಮವನ್ನು ಜುಲೈ 2014 ಕೊನೆಯ ವಾರದಲ್ಲಿ ಗೋವಾ ಮಹಾರಾಷ್ಟ್ರ ಹಾಗೂ ಗುಜರಾತ್ ರಾಜ್ಯಗಳ ಉತ್ತಮ ಸಹಕಾರಿ ಸಂಸ್ಥೆಗಳಿಗೆ ಹಾಗೂ ಪ್ರವಾಸಿ ತಾಣಗಳಿಗೆ ಭೇಟಿ ನೀಡುವ ವ್ಯವಸ್ಥೆ ಮಾಡಲಾಗುವುದು.

**ವಿವರಗಳು ಈ ರೀತಿ ಇವೆ** : ಪ್ರವಾಸದ ಅವಧಿ 10 ದಿನಗಳು ಭಾಗವಹಿಸುವ ಸಹಕಾರಿಗಳ ಸಂಖ್ಯೆ : 30 (ಮೊದಲು ಬಂದವರಿಗೆ ಮೊದಲು ಆದ್ಯತೆ ನಂತರ ಬಂದವರಿಗೆ 2ನೇ ತಂಡದಲ್ಲಿ ಸೇರಿಸಲಾಗುವುದು.) ಪ್ರವಾಸ 2 ಥ 2ಸೀಟಿಂಗ್ ವ್ಯವಸ್ಥೆಯಿರುವ ಪುಶ್ ಬ್ಯಾಕ್ ಇರುವ ಲಕ್ಸುರಿ ಬಸ್, 2 ಊಟ, 1 ಉಪಾಹಾರ, 2 ಕಾಫೀ/ಟಿ. ಸಾಮಾನ್ಯ ವಸತಿ ವ್ಯವಸ್ಥೆ. ಸಾಮೂಹಿಕ ಭೋಜನ ವ್ಯವಸ್ಥೆ ಮಾಡಲಾಗುವುದು. ಪ್ರವಾಸ ಶುಲ್ಕ ತಲಾ ಒಬ್ಬರಿಗೆ ರೂ 15,000/- (ಪ್ರವಾಸ ಮುಗಿದ ನಂತರ ಒಟ್ಟಾರೆ ವೆಚ್ಚವನ್ನು ಕೂಡಿದಾಗ ಈಗ ನಿಗದಿಮಾಡಿರುವುದಕ್ಕಿಂತ ಹೆಚ್ಚುವರಿ ವೆಚ್ಚವಾದಲ್ಲಿ ಪ್ರವಾಸದಲ್ಲಿ ಭಾಗವಹಿಸಿದ ಸೌಹಾರ್ದ ಸಹಕಾರಿಗಳು ಭರಿಸಬೇಕಾಗುತ್ತದೆ.) ದಿನಾಂಕ ನಿಗದಿಯಾದ ನಂತರ ಪ್ರವಾಸದಲ್ಲಿ ಭಾಗವಹಿಸುವ ಸಹಕಾರಿಗಳಿಗೆ ಸೂಚನೆ ನೀಡಲಾಗುವುದು. ಪ್ರವಾಸದಲ್ಲಿ ಭಾಗವಹಿಸಲು ಅಪೇಕ್ಷಿಸುವವರಿಗೆ ನೊಂದಣಿ ಪತ್ರವನ್ನು ಕಳುಹಿಸಲಾಗುವುದು ಈ ಪತ್ರದಲ್ಲಿ ಪ್ರತಿನಿಧಿಗಳು ತಮ್ಮ ಎಲ್ಲ ವಿವರ ಹಾಗೂ ಭಾವಚಿತ್ರವನ್ನು ಲಗತ್ತಿಸಿ ಕಳುಹಿಸುವುದು.

ಹೆಚ್ಚಿನ ವಿವರಗಳಿಗಾಗಿ ಸಂಯುಕ್ತ ಸಹಕಾರಿಯನ್ನು ಸಂಪರ್ಕಿಸಲು ಕೋರಿದೆ. ನೊಂದಣೆಯನ್ನು ಮಾಡಲು ಕೊನೆಯ ದಿನಾಂಕ 30.06.2014. ಹೆಚ್ಚಿನ ಮಾಹಿತಿಗಾಗಿ ಸಂಯುಕ್ತ ಸಹಕಾರಿಯನ್ನು ಸಂಪರ್ಕಿಸಲು ಕೋರಿದೆ.

### 11ನೇ ತಂಡದ ವ್ಯಕ್ತಿತ್ವ ವಿಕಸನ ತರಬೇತಿ

## ಸಹಕಾರಿ ಕ್ಷೇತ್ರದ ಮುಖವಾಣಿಗಳಾಗಿ ಕಾರ್ಯನಿರ್ವಹಿಸಲು ಪೂರಕ – ಶ್ರೀ ಗುರುನಾಥ ಜಾಂತಿಕರ



ವ್ಯಕ್ತಿತ್ವ ವಿಸನ ತರಬೇತಿ ಕಾರ್ಯಕ್ರಮದ ಉದ್ಘಾಟನೆಗೂ ಮುನ್ನ ಭಾರತ ಮಾತೆ ಹಾಗೂ ಶ್ರೀ ಸಿದ್ಧನಗೌಡ ಸಣ್ಣ ರಾಮನಗೌಡ ಪಾಟೀಲ ಭಾವಚಿತ್ರಗಳಿಗೆ ನಮನ.



ಭಾಗವಹಿಸಿದ್ದ ಪ್ರತಿನಿಧಿಗಳು

ದಿನಾಂಕ : 02.06.2014 ಸಂಯುಕ್ತ ಸಹಕಾರಿಯ ನೇತೃತ್ವದಲ್ಲಿ ಸೌಹಾರ್ದ ಸಹಕಾರಿಗಳ ಸಿಬ್ಬಂದಿಯವರಿಗಾಗಿ 10 ದಿನಗಳ ವ್ಯಕ್ತಿತ್ವ ವಿಕಸನ ತರಬೇತಿ ಕಾರ್ಯಕ್ರಮವನ್ನು ಸಂಯುಕ್ತ ಸಹಕಾರಿಯ ಅಧ್ಯಕ್ಷ ಶ್ರೀ ಗುರುನಾಥ ಜಾಂತಿಕರರವರು ಉದ್ಘಾಟಿಸಿ ರಾಜ್ಯದಲ್ಲಿ ಸೌಹಾರ್ದ ಸಹಕಾರಿ ಚಳುವಳಿ ಪ್ರಾರಂಭವಾಗಿ 13 ವರ್ಷಗಳಾಗಿವೆ. ಈ ಕ್ಷೇತ್ರ ತನ್ನ ಬಾಲ್ಯಾವಸ್ಥೆಯನ್ನು ಪೂರೈಸಿ ಈಗ ಪ್ರೌಢಾವಸ್ಥೆಗೆ ಕಾಲಿರಿಸುತ್ತಿದೆ. ತನ್ನ ಪ್ರೌಢಿಮೆಯನ್ನು ಬೆಳೆಸಿಕೊಳ್ಳಬೇಕಿದೆ. ಹೀಗಾಗಿ ಈ ಕ್ಷೇತ್ರದ ಬೆಳವಣಿಗೆ ಬಗ್ಗೆ ಸಂಯುಕ್ತ ಸಹಕಾರಿ ಹಲವಾರು ಕಾರ್ಯಕ್ರಮಗಳನ್ನು ಹಾಕಿಕೊಂಡಿದೆ. ಈ ಕ್ಷೇತ್ರದಲ್ಲಿ ಕಾರ್ಯನಿರ್ವಹಿಸುತ್ತಿರುವ ಸದಸ್ಯರು, ಈ ಆಡಳಿತ ಮಂಡಲಿ ಹಾಗೂ ಸಿಬ್ಬಂದಿಯವರುಗಳಿಗೆ ಈ ಕ್ಷೇತ್ರದ ಕಾರ್ಯಚಟುವಟಿಕೆಗಳನ್ನು ಸಮರ್ಪಕವಾಗಿ ನಿರ್ವಹಿಸಲು ಅಗತ್ಯವಾಗುವ ಶಿಕ್ಷಣ ಹಾಗೂ ತರಬೇತಿಗಳನ್ನು ನಿರಂತರವಾಗಿ ನಡೆಸುತ್ತಿದೆ.

ವಿಶೇಷವಾಗಿ ಸಿಬ್ಬಂದಿಯವರಿಗಾಗಿ ಸಮಗ್ರ ಸಹಕಾರ ಕ್ಷೇತ್ರದ ಕಾರ್ಯನಿರ್ವಹಣೆಯ ಮಾಹಿತಿ ಒದಗಿಸಿ ಅವರ ವ್ಯಕ್ತಿತ್ವ ವಿಕಸನ ಮಾಡುವಂತಹ ತರಬೇತಿ ಕಾರ್ಯಕ್ರಮವನ್ನು ಕಳೆದ 5 ವರ್ಷಗಳಿಂದ ಪ್ರತಿ ವರ್ಷ 10 ದಿನಗಳ ಅವಧಿಯ 2 ತರಬೇತಿ ಕಾರ್ಯಕ್ರಮಗಳನ್ನು ನಡೆಸುತ್ತ ಬಂದಿದೆ. ಈ ತರಬೇತಿ ನಡೆಯುವುದರಿಂದ ಶಿಬಿರಾರ್ಥಿಗಳಿಗೆ ಮಾನಸಿಕ ವಿಕಾಸ, ಕೂಡಿ ಕೆಲಸ ಮಾಡುವುದು, ಉತ್ತಮ ಜ್ಞಾನ, ಸಾರ್ವಜನಿಕ ಸಂಪರ್ಕ, ಗ್ರಾಹಕ ಸೇವಾ ವಿಧಾನಗಳು ಹೀಗೆ ಹತ್ತು ಹಲವು ವಿಷಯದ ಬಗ್ಗೆ ಅರಿವು ಮೂಡಿ ವ್ಯಕ್ತಿತ್ವ ವಿಕಸನಕ್ಕೆ ಅವಕಾಶವಾಗಿ ಅವರುಗಳು ಸಮಾಜದ, ಸಹಕಾರಿಯ ಉತ್ತಮ ವ್ಯಕ್ತಿಗಳಾಗಿ, ಮುಖವಾಣಿಗಳಾಗಿ ಕಾರ್ಯನಿರ್ವಹಿಸಲು ಸಾಧ್ಯವಾಗುತ್ತದೆ ಎಂದು ತಿಳಿಸಿದರು.

ಮುಖ್ಯ ಅತಿಥಿಗಳಾಗಿ ಪ್ರಾದೇಶಿಕ ಸಹಕಾರ ಆಡಳಿತ ನಿರ್ವಹಣಾ ಸಂಸ್ಥೆಯ ಪ್ರಾದೇಶಿಕ ನಿರ್ದೇಶಕರಾದ ಶ್ರೀ ಬಿ. ವಸಂತನಾಯಕರವರು ಮಾತನಾಡಿ ಸಹಕಾರಿ ಕ್ಷೇತ್ರದಲ್ಲಿ ಕಾರ್ಯನಿರ್ವಹಿಸುತ್ತಿರುವ ಎಲ್ಲ ವರ್ಗದ ಸಹಕಾರಿಗಳಿಗೂ ತರಬೇತಿ ಅವಶ್ಯಕ. ಇದು ನಿರಂತರವಾದ ಪ್ರಕ್ರಿಯೆಯಾಗಬೇಕು. ಸಂಯುಕ್ತ ಸಹಕಾರಿಯವರು ಸೌಹಾರ್ದ ಸಹಕಾರಿ ಕ್ಷೇತ್ರದ ಅಭಿವೃದ್ಧಿಗಾಗಿ



ಭಾಗವಹಿಸಿದ್ದ ಪ್ರತಿನಿಧಿಗಳು



ಪ್ರತಿನಿಧಿಗಳ ಪರಿಚಯ

ಮಾಡುತ್ತಿರುವ ಈ ಕಾರ್ಯ ಶ್ಲಾಘನೀಯ ಎಂದರು.ಸಂಯುಕ್ತ ಸಹಕಾರಿಯ ವ್ಯವಸ್ಥಾಪಕ ನಿರ್ದೇಶಕರಾದ ಶ್ರೀ ಶರಣಗೌಡ ಜಿ. ಪಾಟೀಲರವರು ಸ್ವಾಗತ ಹಾಗೂ ಪ್ರಾಸ್ತಾವಿಕ ಭಾಷಣ ಮಾಡಿದರು. ಕಾರ್ಯಕ್ರಮದಲ್ಲಿ ಸಂಯುಕ್ತ ಸಹಕಾರಿಯ ನಿರ್ದೇಶಕರುಗಳಾದ ಶ್ರೀ ಭಾಸ್ಕರ ಹೆಗಡೆ, ಕಾಗೇರಿ ಹಾಗೂ ಶ್ರೀಮತಿ ಮಂಜುಳಾ ಪಾಟೀಲರವರು ಉಪಸ್ಥಿತರಿದ್ದರು. ಶ್ರೀ ವೈ.ಕುಮಾರ್‌ರವರು ವಂದನಾರ್ಪಣೆ ಮಾಡಿದರು. ಶ್ರೀ ಸಿ.ಎನ್.ಪರಶಿವಮೂರ್ತಿಯವರು ಸಹಕಾರ–ಸಹಕಾರ ಸಂಘ–ಸಹಕಾರ ಚಳುವಳಿ ನಡೆದುಬಂದ ದಾರಿ–ಸಹಕಾರ ತತ್ವಗಳು ಮತ್ತುಸಹಕಾರಿ ಸಿಬ್ಬಂದಿಯವರು ತಿಳಿದಿರಬೇಕಾದ ಅಗತ್ಯ ವಿಷಯಗಳ ಬಗ್ಗೆ ಉಪನ್ಯಾಸ ನೀಡಿದರು. ಶ್ರೀ ಭಾಸ್ಕರ ಹೆಗಡೆ, ಕಾಗೇರಿಯವರು ಶಿಬಿರಾರ್ಥಿಗಳ ಪರಸ್ಪರ ಪರಿಚಯ – ಶಿಬಿರಾರ್ಥಿಗಳ ಜವಾಬ್ದಾರಿ, ತಂಡಗಳ ರಚನೆ – ತಂಡಗಳ ಕಾರ್ಯಕ್ರಮಗಳು ವಿಷಯಗಳನ್ನು ನಡೆಸಿಕೊಟ್ಟರು. ಶ್ರೀ ವೈ. ಕುಮಾರ್‌ರವರು ಸೌಹಾರ್ದ ಸಹಕಾರಿ ಕಾಯ್ದೆಯ ಆಶಯ ಹಾಗೂ ಪ್ರಮುಖ ಅಂಶಗಳ ಬಗ್ಗೆ ಉಪನ್ಯಾಸ ನೀಡಿದರು. ಅಧಿಕೃತ ಕಲಾಪಗಳು ಮುಗಿದ ನಂತರ ರಾತ್ರಿ 09:00 ಗಂಟೆಗೆ ಸಂಯುಕ್ತ ಸಹಕಾರಿಯ ಅಧ್ಯಕ್ಷರಾದ ಶ್ರೀ ಗುರುನಾಥ ಜಾಂತಿಕರ ಶಿಬಿರಾರ್ಥಿಗಳೊಂದಿಗೆ ಸಮಾಲೋಚನೆ ನಡೆಸಿದರು. 23 ಜಿಲ್ಲೆಗಳಿಂದ 45 ಸಹಕಾರಿಗಳಿಂದ 70 ಪ್ರತಿನಿಧಿಗಳು ಭಾಗವಹಿಸಿದ್ದರು.

### ಸಹಕಾರ ಕ್ಷೇತ್ರದ ಶಕ್ತಿ ಸಾಮರ್ಥ್ಯ – ನ್ಯೂನತೆಗಳು – ಅವಕಾಶಗಳು ಹಾಗೂ ಸವಾಲುಗಳು (SWOT Analysis)

## ಸೌಹಾರ್ದ ಸಹಕಾರಿಗಳ ನಿರ್ದೇಶಕರ 2ನೇ ತಂಡದ ಪ್ರತಿನಿಧಿಗಳಿಗಾಗಿ ವಿನೂತನ ಕಾರ್ಯಕ್ರಮ

ಸೌಹಾರ್ದ ಸಹಕಾರಿಗಳ ನಿರ್ದೇಶಕರಿಗಾಗಿ ನಡೆದ 2 ದಿನಗಳ ತರಬೇತಿ ಕಾರ್ಯಕ್ರಮದಲ್ಲಿ ಸಹಕಾರ ಕ್ಷೇತ್ರದ ಶಕ್ತಿ ಸಾಮರ್ಥ್ಯ – ದುರ್ಬಲತೆ (ನ್ಯೂನತೆಗಳು) – ಅವಕಾಶಗಳು ಹಾಗೂ ಸವಾಲುಗಳನ್ನು ಅಧ್ಯಯನ ಮಾಡುವ ವಿನೂತನ ಕಾರ್ಯಕ್ರಮಗವನ್ನು ಏರ್ಪಡಿಸಲಾಗಿತ್ತು. ಪ್ರಾರಂಭದಲ್ಲಿ ಪ್ರಾದೇಶಿ ಸಹಕಾರ ಆಡಳಿತ ನಿರ್ವಹಣಾ ಸಂಸ್ಥೆಯ ಎಂ.ಬಿ.ಎ. ವಿಭಾಗದ ನಿರ್ದೇಶಕ ಡಾ. ಎಸ್.ಎ.ಸಿದ್ಧಾಂತಿಯವರು ಈ ಅಧ್ಯಯನಕ್ಕೆ ಅವಶ್ಯವಿರುವ ವಿಭಾಗಗಳ ಬಗ್ಗೆ ಪರಿಚಯ ಮಾಡಿದ ನಂತರ 4 ತಂಡಗಳನ್ನಾಗಿ ಮಾಡಿ ಪ್ರತಿಯೊಂದು ತಂಡಕ್ಕೆ ಒಬ್ಬ ಮಾರ್ಗದರ್ಶನರನ್ನಾಗಿ ನಿಯೋಜಿಸಲಾಗಿಯಿತು.

ಶ್ರೀ ಬಿ.ವಸಂತನಾಯಕ, ಪ್ರಾದೇಶಿಕ ನಿರ್ದೇಶಕರು, ಶ್ರೀ ಶರಣಗೌಡ ಜಿ. ಪಾಟೀಲ ವ್ಯವಸ್ಥಾಪಕ ನಿರ್ದೇಶಕರು, ಶ್ರೀ ವೈ. ಕುಮಾರ್, ಉಪಪ್ರಧಾನ ವ್ಯವಸ್ಥಾಪಕರು ಹಾಗೂ ಶ್ರೀ ವಿ.ಜೆ. ಕಾರಕೂನರವರು ಒಂದೊಂದು ತಂಡದ ಮಾರ್ಗದರ್ಶಕರಾಗಿ ಕಾರ್ಯನಿರ್ವಹಿಸಿದರು. ಶಕ್ತಿ ಸಾಮರ್ಥ್ಯವನ್ನು ಅಧ್ಯಯನ ಮಾಡುವ ತಂಡದ ನಾಯಕರಾಗಿ ಶ್ರೀ ಜಿ.ಎನ್.ಹೆಗಡೆ, ನ್ಯೂನತೆಗಳನ್ನು ಅಧ್ಯಯನ ಮಾಡುವ ತಂಡದ ನಾಯಕರಾಗಿ ಶ್ರೀ ವೈ.ಎನ್.ಮೇಲಿನಮನಿ, ಅವಕಾಶಗಳ ಬಗ್ಗೆ ಅಧ್ಯಯನ ಮಾಡುವ ತಂಡದ ನಾಯಕರಾಗಿ ಶ್ರೀ ಎನ್.ನಾಗಚಂದ್ರ ಹಾಗೂ ಸವಾಲುಗಳ ಅಧ್ಯಯನ ತಂಡದ ನಾಯಕರಾಗಿ ಶ್ರೀ ಟಿ.ಎಸ್.ಶೇಷಾದ್ರಿಯವರು ಕಾರ್ಯನಿರ್ವಹಿಸಿದರು.

## “ನ್ಯೂನತೆಗಳನ್ನು ಮೆಟ್ಟಿ ನಿಲ್ಲುವ ಶಕ್ತಿ ಸಾಮರ್ಥ್ಯ ಸಹಕಾರ ಕ್ಷೇತ್ರಕ್ಕೆ ಇದೆ; ಸವಾಲುಗಳನ್ನು ಅವಕಾಶಗಳನ್ನಾಗಿ ಪರಿವರ್ತಿಸಿ” - ಡಾ. ಸಿದ್ಧಾಂತಿ



ಪ್ರತಿಯೊಂದು ತಂಡವು ಗುಂಪು ಚರ್ಚೆ ಮಾಡಿದ ನಂತರ ತಂಡದ ನಾಯಕರು ತಂಡದ ಅಧ್ಯಯನ ವರದಿಯನ್ನು ಮಂಡಿಸಿದರು. ನಂತರ ಶ್ರೀ ಎಸ್.ಎ.ಸಿದ್ಧಾಂತಿಯವರು ಎಲ್ಲಾ ವರದಿಯ ಅಂಶಗಳನ್ನು ಕ್ರೋಢೀಕರಿಸಿ ಸಹಕಾರ ಕ್ಷೇತ್ರದ ಸಮಗ್ರ (SWOT Analysis) ಶಕ್ತಿ ಸಾಮರ್ಥ್ಯ, ನ್ಯೂನತೆಗಳು, ಅವಕಾಶಗಳು ಹಾಗೂ ಸವಾಲುಗಳ ಬಗ್ಗೆ ಸಭೆಗೆ ಮಾಹಿತಿ ಒದಗಿಸುತ್ತಾ ರಾಷ್ಟ್ರದ ಸಹಕಾರ ಕ್ಷೇತ್ರ ಇಡೀ ವಿಶ್ವದಲ್ಲಿಯೇ ಬೃಹದಾಕಾರದ ಹೆಚ್ಚಿನ ಸಾಧನೆಯನ್ನು ಮಾಡಿರುವ ವಿಶ್ವಕ್ಕೆ ಮಾದರಿಯಾಗಿರುವ ಕ್ಷೇತ್ರವಾಗಿದೆ. ಇಂತಹ ಬೃಹತ್ ರಾಷ್ಟ್ರದಲ್ಲಿ ನ್ಯೂನತೆಗಳಿರುವುದು ಸಹಜ. ಈ “ನ್ಯೂನತೆಗಳನ್ನು ಮೆಟ್ಟಿ ನಿಲ್ಲುವ ಶಕ್ತಿ ಸಾಮರ್ಥ್ಯ ಸಹಕಾರ ಕ್ಷೇತ್ರಕ್ಕೆ ಇದೆ.” ಅದಕ್ಕಾಗಿ ಅವಕಾಶಗಳನ್ನು ಸದುಪಯೋಗಪಡಿಸಿಕೊಳ್ಳುವ ಮತ್ತು ಸವಾಲುಗಳನ್ನು ಅವಕಾಶಗಳನ್ನಾಗಿ ಪರಿವರ್ತಿಸುವ ಶಕ್ತಿಯನ್ನು ಆಡಳಿತ ಮಂಡಲಿಯವರು ಬೆಳಿಸಿಕೊಳ್ಳುವ ಅಗತ್ಯವಿದೆ ಎಂದು ತಿಳಿಸಿದರು. ಕಾರ್ಯಕ್ರಮದಲ್ಲಿ ವಿವಿಧ ಸೌಹಾರ್ದ ಸಹಕಾರಿಗಳ 73 ನಿರ್ದೇಶಕರು ಭಾಗವಹಿಸಿ ಪ್ರಯೋಜನ ಪಡೆದರು.

# ಸಹಕಾರ ಕ್ಷೇತ್ರದಲ್ಲಿ ಸಾಮಾಜಿಕತೆಯ ಮಳೆ ಸುರಿಯಲಿ

**http://www.rainwaterharvesting.org/**

■ ರಘುನಂದನ ಕೆ.
ಕ.ರಾ.ಸೌ.ಸಂ.ಸ.ನಿ., ಬೆಂಗಳೂರು.

ಬಿರು ಬೇಸಿಗೆಯ ಧಗೆ ಮುಗಿದು ಮಳೆಗಾಲ ಆರಂಭವಾಗುವ ನಿರೀಕ್ಷೆಯಲ್ಲಿದ್ದೇವೆ. ಕುಡಿಯುವ ನೀರು ಬತ್ತಿದೆ, ಅಂತರ್ಜಲ ಎಟುಕುತ್ತಿಲ್ಲ, ಸರ್ಕಾರ ನೀರು ಪೂರೈಕೆಗೆ ಹೆಣಗಾಡುತ್ತಿದೆ. ಮೋಡ ಬಿತ್ತನೆಯ ಮಾತು ಕೇಳಿ ಬರುತ್ತಿದೆ. ಮತ್ತೆಲ್ಲೋ ನದಿ ಜೋಡಣೆಯ ಪರಿಹಾರ ಹುಡುಕುವ ಪ್ರಯತ್ನ ನಡೆದಿದೆ. ಮಳೆಗಾಗಿ ಭೂಮಿ ಮತ್ತು ಜೀವ ಸಂಕುಲ ಕಾದು ಕುಳಿತಿದೆ. ನಿಸರ್ಗಕ್ಕೆ ಕರುಣೆ, ಮಳೆ ಸುರಿಯುತ್ತದೆ, ನೀರು ಹರಿಯುತ್ತದೆ, ನಾವು ತಂಪಾಗುತ್ತೇವೆ. ಮುಂದಿನ ವರ್ಷದ ಬೇಸಿಗೆಗೆ ಮತ್ತದೆ ನೀರ ಹಾಹಾಕಾರ. ಪ್ರತಿ ವರ್ಷ ಕರ್ನಾಟಕದಲ್ಲಿ 15 ಸಾವಿರ ಎಕರೆಯಷ್ಟು ಪ್ರದೇಶ ಬರಡಾಗುತ್ತಿದೆ ಎನ್ನುತ್ತವೆ ಅಧ್ಯಯನಗಳು. ಕಾರಣ ಹುಡುಕಿದರೆ ನಾವೇ ಮಾಡಿಕೊಂಡ ನೂರು ತಪ್ಪು. ತಪ್ಪಿಗೆ ಕಾರಣ ಹುಡುಕುತ್ತ ಕುಳಿತರೆ ದಾಹ ಇಂಗುವುದಿಲ್ಲ. ಪರಿಹಾರ ಹುಡುಕುವ ಪ್ರಯತ್ನವೂ ನಮ್ಮದೆ ಆಗಬೇಕಲ್ಲವೆ.

ನೀರಿನ ಸಮಸ್ಯೆ ಅತಿ ದೊಡ್ಡ ಪ್ರಮಾಣದಲ್ಲಿ ಕಾಡುತ್ತಿದ್ದರೂ ಅದನ್ನು ಉಳಿಸುವ, ಅಂತರ್ಜಲ ಹೆಚ್ಚಿಸುವ ಮಳೆ ಕೊಯ್ಲು, ಜಲಮರುಪೂರಣದಂತಹ ವಿಷಯಗಳ ಬಗ್ಗೆ ಜಾಗೃತಿ ಅತ್ಯಂತ ಕಡಿಮೆ. ನಮಗೆ ಮಳೆ ನೀರ ಬಗ್ಗೆ ಕಾಳಜಿ ಕಡಿಮೆ, ಅದು ಸುರಿದು ಹರಿದು ವ್ಯರ್ಥವಾಗುತ್ತಿದ್ದರೆ ನಮಗೆ ಸಂಬಂಧವೇ ಇಲ್ಲವೆನ್ನುವಂತೆ ಇದ್ದುಬಿಡುತ್ತೇವೆ. ನಮ್ಮ ಮನೆಯ ನಲ್ಲಿಗಳಲ್ಲಿ ನೀರು ಬಂದರೆ ಸಾಕು ಎನ್ನುವ ಮನೋಭಾವ. ಆದರೆ, ನೀರು ಸಾಮಾಜಿಕ ಘರ್ಷಣೆಗಳಿಗೆ ಕಾರಣವಾಗುತ್ತಿದೆ, ಮುಂದಿನ ಯುದ್ಧಗಳು ನೀರಿಗಾಗಿ ಆಗುತ್ತವೆ ಎಂದು ಹೇಳುತ್ತಿವೆ ವರದಿಗಳು. ರಾಜ್ಯದ, ದೇಶದ ಅಭಿವೃದ್ಧಿಯಲ್ಲಿ ನೀರಿನ ಪಾತ್ರ ಮಹತ್ವದ್ದು ಎನ್ನುವುದು ನಮಗೆ ತಿಳಿದಿದೆ. ನಮ್ಮ ಪಾತ್ರದ ಬಗ್ಗೆ ಅರಿವು ಮೂಡಿಸಿಕೊಳ್ಳಬೇಕಿದೆ. ಈ ನಿಟ್ಟಿನಲ್ಲಿ ಪ್ರತೀ ಗ್ರಾಮವನ್ನೂ ತಲುಪಿರುವ ಸಹಕಾರ ಸಂಸ್ಥೆಗಳು ಪ್ರಯತ್ನ ಆರಂಭಿಸಬೇಕಿದೆ.

ಬರದ ಊರಲ್ಲಿ ಬೀಳುವ ಅಲ್ಪ ಮಳೆ ನೀರ ಉಳಿಸಲು, ಅಂತರ್ಜಲ ಸಿಗದ ಗ್ರಾಮಗಳಲ್ಲಿ ಭೂಮಿಯೊಳಗೆ ನೀರ ಹರಿಸಲು, ನೀರ ಬವಣೆಯ ನಿವಾರಿಸಲು ಸುಲಭ ಹಾಗೂ ಕಡಿಮೆ ಖರ್ಚಿನ ಮಾರ್ಗ ಮಳೆ ನೀರ ಸಂರಕ್ಷಣೆ. 36 ವರ್ಷ ಬರದಲ್ಲಿ ನರಳಿದ ಚೀನಾದ ಗಾನ್ಸು ಪ್ರಾಂತ್ಯದ ದಾಹ ತೀರಿದ್ದು, ಅಭಿವೃದ್ಧಿ ರಾಷ್ಟ್ರವಾಗಿ ತನ್ನ ಹೆಸರು ಬರೆಸಿಕೊಂಡ ಥಾಯ್ಲೆಂಡ್ ದೇಶದ್ದು, ಅಷ್ಟೇಕೆ ಮಳೆ ನೀರ ಸಂರಕ್ಷಣೆಯ ಜಲಚರಿತ್ರೆಯಲ್ಲಿ ನಮ್ಮ ಗುಜರಾತ್ ಹಾಗೂ ರಾಜಸ್ಥಾನದ ಎಷ್ಟೋ ಗ್ರಾಮಗಳ ಯಶೋಗಾಥೆಗಳಿವೆ.

**ವೆಬ್‌ತಾಣ 22 : http://www.rainwaterharvesting.org/**

- ಸೆಂಟರ್ ಫಾರ್ ಸೈನ್ಸ್ & ಎನ್ವಿರೋನ್‌ಮೆಂಟ್ (ಸಿಎಸ್‌ಇ) ದೆಹಲಿ ಮೂಲದ ಸಾರ್ವಜನಿಕ ಹಿತಾಸಕ್ತಿ ಸಂಶೋಧನೆ ಮತ್ತು ಸಮರ್ಥನಾ ಸಂಸ್ಥೆ. ಪರಿಸರ ಸಂರಕ್ಷಣಾ ವಿಷಯಗಳಿಗೆ ಸಂಬಂಧಿಸಿದಂತೆ ಸಂಶೋಧನೆ ಮಾಡುವುದು ಹಾಗೂ ಜಾಗೃತಿ ಉಂಟು ಮಾಡುವ ಕಾರ್ಯ ನಡೆಸುತ್ತ ಬಂದಿದೆ. ಜಲ ಸಂರಕ್ಷಣೆ ಕಾರ್ಯದ ಅಂಗವಾಗಿ ಈ ವೆಬ್‌ತಾಣವನ್ನ ರಚಿಸಲಾಗಿದೆ.
- ಮಳೆ ನೀರ ಕೊಯ್ಲು ಹಾಗೂ ಕೆರೆಗಳ ಪುನರುಜ್ಜೀವನ ವಿಷಯವನ್ನು ಪ್ರಚುರಪಡಿಸುವುದು ಈ ವೆಬ್‌ತಾಣದ ಉದ್ದೇಶ. ಜಲ ಸ್ವರಾಜ್ ಅಭಿಯಾನ, ಗ್ರಾಮೀಣ ಮಟ್ಟದಲ್ಲಿ ಜಲ ಜಾಗೃತಿ ಮೂಡಿಸುವುದು, ನೀರು ಪೂರೈಕೆಯ ವಿಧಾನ ಮುಂತಾದ ಮಾಹಿತಿಗಳು ಈ ತಾಣದಲ್ಲಿ ಲಭ್ಯ.
- ಜಲ ಬಿಕ್ಕಟ್ಟು ಉಂಟಾದ ಬಗೆ, ಈ ಬಿಕ್ಕಟ್ಟನ್ನು ನಿವಾರಿಸುವ ವಿಧಾನ, ಮಳೆ ನೀರು ಕೊಯ್ಲು ಹಾಗೂ ಜಲ ಸಂಗ್ರಹದ ವಿಧಾನಗಳು, ಈ ಬಗ್ಗೆ ಇರುವ ವರದಿ, ಲೇಖನಗಳು, ಜಲ ಯೋಧ ಎನ್ನುವ ಪರಿಕಲ್ಪನೆ, ಪತ್ರಿಕಾ ಪ್ರಕಟಣೆಗಳು, ಹಮ್ಮಿಕೊಳ್ಳುವ ಕಾರ್ಯಕ್ರಮಗಳ ಮಾಹಿತಿಗಳನ್ನು ಇಲ್ಲಿ ನೋಡಬಹುದು.
- ದೇಶದ ಬೇರೆ ಬೇರೆ ಭೌಗೋಳಿಕ ಪ್ರದೇಶದಲ್ಲಿ ಜಲ ಸಂರಕ್ಷಣೆಗೆ ಅನುಸರಿಸುತ್ತಿರುವ ವಿಧಾನಗಳು, ನಗರದಲ್ಲಿ ಚಾವಣಿ ನೀರು ಸಂಗ್ರಹದ ವಿಧಾನದ ಮಾಹಿತಿ ಈ ತಾಣದಲ್ಲಿ ದೊರೆಯುತ್ತದೆ.
- ನಗರಗಳಲ್ಲಿ ಈ ಬಗ್ಗೆ ಇರುವ ಸಂಸ್ಥೆಗಳ ಮಾಹಿತಿ, ವಿವಿಧ ಸ್ಥಳಗಳಲ್ಲಿ ಉಂಟಾಗುವ ಮಳೆಯ ಪ್ರಮಾಣದ ವಿವರ, ವಿವಿಧ ರಾಜ್ಯಗಳಲ್ಲಿ ಹಾಗೂ ದೇಶಗಳಲ್ಲಿನ ಜಲ ಸಂರಕ್ಷಣೆಯ ಬಗ್ಗೆ ಸರ್ಕಾರದ ಕ್ರಮಗಳು, ರಾಷ್ಟ್ರೀಯ ಹಾಗೂ ಅಂತಾರಾಷ್ಟ್ರೀಯ ಕೇಸ್ ಸ್ಟಡಿ, ಮಾದರಿ, ಅಧ್ಯಯನದ ವಿವರಗಳು ಈ ತಾಣದಲ್ಲಿ ಲಭ್ಯ.

ರಾಜಸ್ಥಾನದ ಬರದ ನಾಡಿನ ಲಾಪೋಡಿಯಾ ಗ್ರಾಮದಲ್ಲಿ ಇಂದು ಹಸಿರು ನಳನಳಿಸುತ್ತಿದೆಯಾದರೆ, ಅಲ್ಲಿನ ರೈತರು, ಮಹಿಳೆಯರು ಸ್ವಾವಲಂಬಿಗಳಾಗಿದ್ದರೆ, ಮೂರು ವರ್ಷಗಳಲ್ಲಿ ಬಿದ್ದ ಮಳೆಯ ಪ್ರಮಾಣ ಕೇವಲ 348 ಮಿ.ಮೀ. ಆಗಿದ್ದರೂ ನೀರಿಗೆ ಕೊರತೆಯಾಗಲಿಲ್ಲವಾದರೆ ಅದಕ್ಕೆ ಕಾರಣ ಅಲ್ಲಿನ ಜಲಸೇನಾನಿ ಲಕ್ಷ್ಮಣ ಸಿಂಗ್‌ರ ಜಲ ಸಂರಕ್ಷಣೆಯ ಹೋರಾಟ. ಇಂದು ಈ ಗ್ರಾಮದ ಮಾದರಿ ಸುತ್ತಲಿನ 90 ಹಳ್ಳಿಗೆ ವಿಸ್ತಾರಗೊಂಡಿದೆ, 40 ಸಾವಿರ ಕುಟುಂಬಗಳು ನೀರ ನೆಮ್ಮದಿಯಲ್ಲಿವೆ. ಒಬ್ಬ ವ್ಯಕ್ತಿ ಸಾಧಿಸಬಹುದಾದರೆ ಒಂದು ಸಹಕಾರ ಸಂಸ್ಥೆ ಸಾಧಿಸಲಾಗದ್ದೇನು. ಕಡಿಮೆ ಖರ್ಚಿನಲ್ಲಿ ಸಾಮಾಜಿಕ ಕಳಕಳಿಯ ತತ್ವಕ್ಕೆ ಅರ್ಥ ತರುವ ಕೆಲಸ ಸಹಕಾರ ಸಂಸ್ಥೆಗಳಿಂದ ಆಗಬೇಕಿದೆ. ಮಳೆಗಾಲದಲ್ಲಿ ಭೂಮಿ ಎಂಬ ಬ್ಯಾಂಕಿನಲ್ಲಿ ನೀರನ್ನು ಠೇವಣಿ ಇಟ್ಟರೆ ಬೇಸಿಗೆಯಲ್ಲದು ತನ್ನಿಂದ ತಾನೇ ನಗದಾಗುತ್ತದೆ.

ಜಲ ಸಂರಕ್ಷಣೆಯ ಸಾಹಸಗಾಥೆಗಳಿಗಾಗಿ ಸಂಪರ್ಕಿಸಬಹುದಾದ ತಾಣ – http://neersaadhak.blogspot.in/

# ಕೌಶಲ್ಯದೊಂದಿಗೆ ವೇಗ ಸೇರಿದರೆ ಗೆಲುವು

▸▸ ಆರ್ನಂದನ್, ಯಲ್ಲಾಪುರ

ಯಾರಿಗೂ ಬೇಸಿಕ್ ಸ್ಕಿಲ್ಸ್ ಹೊರತುಪಡಿಸಿ ಮತ್ಯಾವ ಕೌಶಲ್ಯವೂ ಹುಟ್ಟುತ್ತಲೇ ಬಂದಿರೋದಿಲ್ಲ. ಬೆಳವಣಿಗೆಯ ವಿವಿಧ ಹಂತದಲ್ಲಿ ಜ್ಞಾನ ಸಂಪಾದನೆಯಾಗುತ್ತದೆ ಆದರೆ ಕೌಶಲ್ಯವಲ್ಲ. ಕೌಶಲ್ಯವನ್ನ ರೂಢಿಸಿಕೊಳ್ಳಬೇಕಾಗುತ್ತದೆ. ನಮ್ಮ ಅನುಭವ, ಸೋಲು, ಪ್ರಯತ್ನಗಳು, ತರಬೇತಿ, ಅಧ್ಯಯನ ಕೌಶಲ್ಯವನ್ನ ಬೆಳೆಸುತ್ತೆ. ಕೌಶಲ್ಯವೊಂದಿದ್ದರೆ ಸಾಕು ಗೆಲ್ಲಬಹುದು, ಎನ್ನುವ ಕಾಲದಿಂದ ನಾವು ಬಹುದೂರ ಸಾಗಿ ಬಂದಿದ್ದೇವೆ. ಈಗ ಕೌಶಲ್ಯಗಳಿಂದ ಆಕರ್ಷಿಸಬಹುದು ಆದರೆ ಗೆಲ್ಲಲಾಗುವುದಿಲ್ಲ. ನಂ.1 ಆಗಲು ಕೌಶಲ್ಯ ಮಾತ್ರ ಸಾಲುವುದಿಲ್ಲ. ಹಾಗಾದರೆ ಕೌಶಲ್ಯದೊಂದಿಗೆ ಮತ್ತೇನು ಬೇಕು. ಉತ್ತರ ಸುತ್ತಲಿನ ಪ್ರಪಂಚದಲ್ಲೆ ಇದೆ.

ಪ್ರಪಂಚದಲ್ಲಿ ಆದ ಎಲ್ಲ ಸಂಶೋಧನೆಗಳಲ್ಲಿ ಅತಿ ಹೆಚ್ಚು ಸಂಶೋಧನೆಗಳು ಕಳೆದ ಒಂದು ಶತಮಾನದಲ್ಲಿ ಆಗಿವೆ ಎನ್ನುತ್ತದೆ ವಿಜ್ಞಾನ. ಮಾನವ ಚರಿತ್ರೆಯ ಇತಿಹಾಸವನ್ನೇ ಗಮನಿಸಿ, ತಲೆಮಾರಿನಿಂದ ತಲೆಮಾರಿಗೆ ಬದುಕು ವೇಗವನ್ನು ಪಡೆಯುತ್ತಿದೆಯಲ್ಲವೆ. ಇಂದಿನ ತಲೆಮಾರು ವೇಗದ ಪ್ರಪಂಚದಲ್ಲಿ ಅಸ್ತಿತ್ವಕ್ಕಾಗಿ ಹೋರಾಡುತ್ತಿದೆ ಎನಿಸುವುದಿಲ್ಲವೆ. ಒಂದು ಕಾಲದಲ್ಲಿ ರೈಲಿನ ವೇಗವೇ ಅಚ್ಚರಿಯಾಗಿತ್ತು, ಇವತ್ತಿಗೆ ಮೆಟ್ರೋ, ನ್ಯಾನೋ ರೈಲುಗಳ ವೇಗಗಳು ಸಾಲುತ್ತಿಲ್ಲ, ಬುಲೆಟ್ ರೈಲುಗಳು ಬರುತ್ತಿವೆ. ಇ ಮೇಲ್‌ಗೆ ಮಾತ್ರ ಬಳಕೆಯಾಗುತ್ತಿದ್ದ ಅಂತರ್ಜಾಲದಲ್ಲಿ ಸಾಮಾಜಿಕ ಜಾಲತಾಣಗಳು, ಹೊಸ ಅಪ್ಲಿಕೇಷನ್‌ಗಳು ಮಾಹಿತಿ ಹಂಚಿಕೆಯ, ಸಂವಹನದ ವೇಗವನ್ನ ಹೆಚ್ಚಿಸಿವೆ. ಇಂದಿನ ತಲೆಮಾರಿನ ಜ್ಞಾನ ಸಂಗ್ರಹ ಹಾಗೂ ಬುದ್ಧಿವಂತಿಕೆಯ ವೇಗ ಅಚ್ಚರಿಗೊಳಿಸುತ್ತದೆಯಲ್ಲವೆ.

ಇಂದಿನ ಗೆಲುವಿನ ದಾರಿಯಲ್ಲಿ ಸ್ಪರ್ಧೆ ಇರುವುದು ಕೌಶಲ್ಯದ್ದಲ್ಲ, ವೇಗದ್ದೂ ಅಲ್ಲ. ಕೌಶಲ್ಯದಿಂದ ಕೂಡಿದ ವೇಗದ್ದು. ಕೌಶಲ್ಯವಿಲ್ಲದೆ ಓಡುವವ ಮುಗ್ಗರಿಸುತ್ತಾನೆ, ಕೌಶಲ್ಯವೊಂದೆ ಇರುವವ ಹಿಂದೆಯೇ ಉಳಿಯುತ್ತಾನೆ. ಎರಡರಲ್ಲೂ ಸಮನ್ವಯ ಸಾಧಿಸಿ ಓಡುವವ ಗೆಲ್ಲುತ್ತಾನೆ. ಕೌಶಲ್ಯದ ಕ್ಲಾಸಿಕ್ ಆಟವಾಗಿದ್ದ ಕ್ರಿಕೇಟ್‌ನಲ್ಲಿ ಕೌಶಲ್ಯದೊಂದಿಗೆ ವೇಗವನ್ನು ಸೇರಿಸಿದ್ದಕ್ಕೆ ಇವತ್ತು ಸಚಿನ್ ತೆಂಡುಲ್ಕರ್ ಏನಾಗಿದ್ದಾರೆ ಎನ್ನುವುದು ನಮಗೆ ಗೊತ್ತಿದೆ. ಕೌಶಲ್ಯಕ್ಕಿಂತ ವೇಗವೊಂದನ್ನೆ ಆಯ್ಕೆ ಮಾಡಿಕೊಂಡು ಬಂದ ಎಷ್ಟೋ ಆಟಗಾರರು ಎಷ್ಟು ದಿನ ಆಡಿದ್ದಾರೆ ಎನ್ನುವುದು ನಮ್ಮ ಕಣ್ಮುಂದೆಯೇ ಇದೆ. ಜಾಣ್ಮೆಯಿಂದ ಗಾಡಿಯನ್ನು ಓಡಿಸಿದರೆ ಸಾಲುವುದಿಲ್ಲ, ಜಾಣ್ಮೆಯ ಜೊತೆಗೆ ವೇಗವಾಗಿ ಓಡಿಸಿದರೆ ಮಾತ್ರ ನಿಗದಿತ ಸಮಯದಲ್ಲಿ ಗುರಿ ತಲುಪಲು ಸಾಧ್ಯ. ಕೌಶಲ್ಯವೊಂದಿದ್ದರೆ ಸಾಕು ಎನ್ನುವ ಕಾಲ ಇದಲ್ಲ, ಈಗ ಎಲ್ಲರಿಗೂ ಕನಿಷ್ಠ ಕೌಶಲ್ಯವಿದ್ದೇ ಇರುತ್ತದೆ. ಜೊತೆಗೆ ವೇಗವೂ ಬೇಕು. ಕಾಲ ಬದಲಾಗಿದೆ, ನಾವು ಒಪ್ಪಿಕೊಳ್ಳಬೇಕಿದೆ.

ಗೆಲುವೆಂದರೆ ಗುರಿಯನ್ನು ತಲುಪುವುದು, ಅಂದುಕೊಂಡಿದ್ದನ್ನ ಸಾಧಿಸುವುದು, ಕನಸನ್ನು ನನಸಾಗಿಸಿಕೊಳ್ಳುವುದು. ಗೆಲುವೆಂದರೆ ಶ್ರೀಮಂತಿಕೆಯೆಂದೂ, ಅಧಿಕಾರವೆಂದು, ಜನಪ್ರಿಯತೆಯೆಂದೂ ಅಂದುಕೊಳ್ಳುವವರೇ ಹೆಚ್ಚು. ಗೆಲುವಿನಿಂದ ಇದೆಲ್ಲವೂ ಸಿಗುತ್ತದೆ. ಆದರೆ ಗೆಲುವೆಂದರೆ ಇವಷ್ಟೆ ಅಲ್ಲ ಎನ್ನುವ ಅರಿವು ಬೇಕು. ಗೆಲುವಿನ ದಾರಿಗೆ ಮೊದಲು ಗುರಿ ಬೇಕು, ನಂತರ ತಲಪುವ ಕನಸು ಮೂಡಬೇಕು. ಹೆಂಗೆಂಗೋ ನಡೆದರೆ ಗೆಲುವು ಸಿಕ್ಕುವುದಿಲ್ಲ, ದಾರಿ ಮತ್ತು ಬದುಕು ಸವೆಯುತ್ತದೆ ಅಷ್ಟೆ. ಒಂದಷ್ಟು ಕೌಶಲ್ಯವನ್ನ ರೂಢಿಸಿಕೊಂಡು, ಸಮಯದ ಮಿತಿಯೊಳಗೆ ವೇಗ ರೂಢಿಸಿಕೊಂಡು ನಡೆಯಬೇಕು. ಗುರಿ ನಮ್ಮದಾದಾಗ ಸ್ಪರ್ಧೆಯು ನಮ್ಮೊಂದಿಗೆ, ನಮ್ಮ ಸಮಯದೊಂದಿಗೆ ಆಗಬೇಕು. ಮತ್ಯಾರದೋ ಬೆನ್ನ ಹಿಡಿದು ಹೊರಟರೆ ನಮ್ಮ ಗುರಿ ನಮ್ಮ ಗೆಲುವು ಸಿಕ್ಕುವುದಿಲ್ಲ. ಕೌಶಲ್ಯ ಸೇರಿಸಿಕೊಂಡು ಹಾಗೂ ಗುರಿಯೆಡೆಗಿನ ತುಡಿತ ಅಂತರಂಗದಲ್ಲಿ ಮೂಡಿದರೆ ಗೆಲುವು ಸಾಧ್ಯ.

ವೇಗ ಬೇಕಿರುವುದು ಗೆಲುವಿನ ಸ್ಪರ್ಧೆಗೊಂದೇ ಅಲ್ಲ, ಬದುಕಿನ ಸ್ಪರ್ಧೆಗೂ, ಕನಸಿನ ಹೋರಾಟಕ್ಕೂ. ಸಂಶೋಧನೆಗಳ ವೇಗ, ತಂತ್ರಜ್ಞಾನದ ವೇಗ, ಅವಶ್ಯಕತೆಗಳ ವೇಗ ಹೆಚ್ಚುತ್ತಲೇ ಇದೆ. ಬದುಕಿನೆದುರು ಅಪಾರ ಅವಕಾಶಗಳಿವೆ. ಕಾಲನ ವೇಗದೆದುರು ನಿಲ್ಲಲಾಗದು, ಕನಸಿನ ವೇಗಕ್ಕಾದರೂ ತಲುಪಬಹುದೇ ಎನ್ನುವುದರ ಮೇಲೆ ಬದುಕಿನ ಗೆಲುವು ನಿಂತಿದೆ. ನಾವು ಒಂದಿಷ್ಟು ಕೌಶಲ್ಯಗಳಿಗೆ ತೃಪ್ತರಾಗಿ ಇದ್ದಲ್ಲೆ ಇದ್ದರೆ ಗೆಲುವು ಧಕ್ಕದು. ಕನಸುಗಳ ಬೆನ್ನಟ್ಟುವ ಧೈರ್ಯವನ್ನು ವೇಗವನ್ನು ರೂಢಿಸಿಕೊಳ್ಳಬೇಕಿದೆ. ಗೆಲುವಿನ ದಾರಿಯಲ್ಲಿ ಒಂದಷ್ಟು ವಿಷಯಗಳನ್ನ ಹಂಚಿಕೊಂಡಿದ್ದೇವೆ. ಕೌಶಲ್ಯಗಳ ಬಗ್ಗೆ ವೇಗದ ಬಗ್ಗೆ ಮಾತಾಡಿದ್ದೇವೆ, ಫಲಿತಾಂಶದಲ್ಲಿ ಗೆಲುವು ಮೂಡುತ್ತದಾ ನೋಡಬೇಕಿದೆ. ಕೌಶಲ್ಯಗಳ ರೂಢಿಸಿಕೊಳ್ಳುವ ಕನಸುಗಳ ಬೆನ್ನಟ್ಟುವ ಪ್ರಯತ್ನ ಶುರುವಾಗಲಿ.

ನಿಮ್ಮ ಪ್ರತಿಕ್ರಿಯೆಗೆ : raghunandan592@gmail.com

# ಸಹಕಾರಿ ಬ್ಯಾಂಕುಗಳ ಆಡಳಿತ ಮಂಡಳಿಯಲ್ಲಿ ವೃತ್ತಿಪರತೆ

(ಶ್ರೀ ಪಿ.ಆರ್. ಕುಲಕರ್ಣಿ, ಸಮಾಲೋಚಕರು, ಬ್ಯಾಂಕಿಂಗ್, ಕಾನೂನು ಮತ್ತು ಬ್ಯಾಂಕಿಂಗ್ ತಂತ್ರಜ್ಞಾನ ಇವರಿಂದ ಪ್ರಸ್ತುತಪಡಿಸಲಾದ ಉಪನ್ಯಾಸದ ಆಯ್ದ ಭಾಗ)

ಅನುವಾದ – ದಿವ್ಯ ಟಿ.

...ಹಿಂದಿನ ಸಂಚಿಕೆಯಿಂದ

ಸಹಕಾರಿ ಬ್ಯಾಂಕುಗಳ ಉತ್ತಮವಾದ ಕಾರ್ಯನಿರ್ವಹಣೆಗೆ ಅದರ ನಿರ್ದೇಶಕ ಮಂಡಲಿಯ ಪಾತ್ರವು ಬಹುಮುಖ್ಯವಾದದ್ದು. ಹಿಂದಿನ ಸಂಚಿಕೆಯಲ್ಲಿ ಸಹಕಾರಿ ಬ್ಯಾಂಕುಗಳ ಮೇಲೆ ಆರ್‌ಬಿಐ ಮತ್ತು ಸರ್ಕಾರದ ನಿಯಂತ್ರಣ, ನಿರ್ದೇಶಕರ ಮಂಡಲಿ, ಅವರ ಪಾತ್ರ, ಅವರಿಂದ ನಿರೀಕ್ಷೆಗಳು, ವೃತ್ತಿಪರ ನಿರ್ದೇಶಕರು, ಮಂಡಲಿಯ ಸದಸ್ಯರಿಂದ ನಿರ್ವಹಿಸಬೇಕಾದ ಜವಾಬ್ದಾರಿಗಳ ಬಗ್ಗೆ ತಿಳಿದುಕೊಂಡಿದ್ದೇವೆ. ಅದರ ಮುಂದುವರೆದ ಭಾಗ.

**ಮಂಡಲಿ ಸದಸ್ಯರಿಂದ ನಿರ್ವಹಿಸಬಾರದ್ದು :**

**1. ಹಸ್ತಕ್ಷೇಪದ ಬಗ್ಗೆ (Non Interference Issues) :**

- ನಿರ್ದೇಶಕರು ಬ್ಯಾಂಕಿನ ದೈನಂದಿನ ಚಟುವಟಿಕೆಗಳಲ್ಲಿ ಅಥವಾ ಪ್ರತಿದಿನದ ವ್ಯವಹಾರದಲ್ಲಿ ಮತ್ತು ನಿರ್ವಹಣಾ ಕಾರ್ಯಗಳಲ್ಲಿ ಹಸ್ತಕ್ಷೇಪ ಮಾಡಬಾರದು.
- ನಿರ್ದೇಶಕರು ಯಾವುದೇ ರೀತಿಯಲ್ಲಿ ವೈಯಕ್ತಿಕ ವಾಗಿ ಬ್ಯಾಂಕಿನ ಯಾವುದೇ ಅಧಿಕಾರಿ / ನೌಕರರಿಗೆ ಸೂಚನೆಗಳನ್ನು, ನಿರ್ದೇಶನಗಳನ್ನು ನೀಡಬಾರದು.

**2. ಪ್ರಾಯೋಜಕತ್ವದ ಬಗ್ಗೆ (No Sponsorship Issues) :**

- ನಿರ್ದೇಶಕರು ಯಾವುದೇ ಸಾಲ ಪ್ರಸ್ತಾವನೆಗೆ, ಬ್ಯಾಂಕಿನ ಸ್ಥಳವಕಾಶಕ್ಕಾಗಿ ಕಟ್ಟಡ ಮತ್ತು ನಿವೇಶನಗಳಿಗೆ ಪ್ರಾಯೋಕತ್ವ ನೀಡಬಾರದು.
- ನಿರ್ದೇಶಕರು ಯಾವುದೇ ರೀತಿಯ ಸೌಲಭ್ಯಗಳ ಮಂಜೂರಾತಿಗಾಗಿ ಪ್ರಭಾವಿಸಬಾರದು.
- ನಿರ್ದೇಶಕರು ಮಂಡಲಿಯ ಚರ್ಚೆಗಳಲ್ಲಿ ಯಾವುದೇ ಒಂದು ಪ್ರಸ್ತಾವನೆಯಲ್ಲಿ ನೇರವಾಗಿ ಅಥವಾ ಪರೋಕ್ಷವಾಗಿ ಆಸಕ್ತಿ ಹೊಂದಿದ್ದಲ್ಲಿ ಅಂತಹ ಚರ್ಚೆಗಳಲ್ಲಿ ಭಾಗವಹಿಸಬಾರದು. ಮುಂಚಿತವಾಗಿಯೇ ಮುಖ್ಯಕಾರ್ಯನಿರ್ವಾಹಕರಿಗೆ ಮತ್ತು ಆಡಳಿತ ಮಂಡಲಿಗೆ ತಮ್ಮ ಆಸಕ್ತಿಯನ್ನು ಬಹಿರಂಗ ಪಡಿಸಬೇಕು.
- ನಿರ್ದೇಶಕರು ಯಾವುದೇ ಅಭ್ಯರ್ಥಿಯ ನೇಮಕಾತಿ ಅಥವಾ ಪದೋನ್ನತಿ ಅಥವಾ ಸಿಬ್ಬಂದಿಯ ಆಯ್ಕೆ ಪ್ರಕ್ರಿಯೆಯಲ್ಲಿ / ನೇಮಕಾತಿ ಅಥವಾ ವರ್ಗಾವಣೆಯಲ್ಲಿ ಹಸ್ತಕ್ಷೇಪ ಮಾಡಬಾರದು.
- ನಿರ್ದೇಶಕರು ಹಸ್ತಕ್ಷೇಪದ ಜೊತೆಗೆ ಮತ್ತು / ಅಥವಾ ಸಿಬ್ಬಂದಿಯ ಶಿಸ್ತು, ಒಳ್ಳೆಯ ನಡತೆ ಮತ್ತು ಸಮಗ್ರತೆಯನ್ನು ನಿರ್ವಹಿಸುವುದಕ್ಕಾಗಿ ವಿನಾಶಕಾರಿ ಕ್ರಮಗಳನ್ನು ತೆಗೆದುಕೊಳ್ಳಬಾರದು.
- ನಿರ್ದೇಶಕರು ಸಿಬ್ಬಂದಿಗಳ ಆಡಳಿತಕ್ಕೆ ಸಂಬಂಧಿಸಿದ



ಯಾವುದೇ ವಿಚಾರಗಳಲ್ಲಿ ಅಂದರೆ ನೇಮಕಾತಿ, ವರ್ಗಾವಣೆ, ಪದೋನ್ನತಿ ಅಥವಾ ಯಾವುದೇ ಸಿಬ್ಬಂದಿಯ ವೈಯಕ್ತಿಕ ಅಸಮಾಧಾನಗಳನ್ನು ನಿವಾರಣೆ ಮಾಡುವಲ್ಲಿ ತಮ್ಮನ್ನು ತಾವು ತೊಡಗಿಸಿಕೊಳ್ಳಬಾರದು.
- ನಿರ್ದೇಶಕರು ವೈಯಕ್ತಿಕವಾಗಿ ಅಧಿಕಾರಿ / ಸಿಬ್ಬಂದಿ ಅಥವಾ ಯೂನಿಯನ್‌ನನ್ನು ಅವರ ಯಾವುದೇ ವಿಚಾರಗಳಲ್ಲಿ ಪ್ರೋತ್ಸಾಹಿಸಬಾರದು.

**3. ಗೌಪ್ಯತೆಯ ಬಗ್ಗೆ (About Confidentiality) :**

- ನಿರ್ದೇಶಕರು ಬ್ಯಾಂಕಿನ ಸಾಂವಿಧಾನಿಕ ವಿಷಯಕ್ಕೆ ಸಂಬಂಧಿಸಿದಂತೆ ಬ್ಯಾಂಕಿನ ಗೌಪ್ಯತೆ ಮತ್ತು ನಿಷ್ಠೆಯ ಅಡಿಯಲ್ಲಿ ಯಾವುದೇ ವಿಷಯವನ್ನು ಯಾರಿಗೂ ಬಹಿರಂಗಪಡಿಸಬಾರದು.
- ನಿರ್ದೇಶಕರು ಬ್ಯಾಂಕಿನ ಅಜೆಂಡಾ ಪತ್ರಿಕೆಗಳನ್ನು / ಟಿಪ್ಪಣಿಗಳ ಗೌಪ್ಯತೆಯನ್ನು ಖಚಿತಪಡಿಸಿಕೊಳ್ಳುವುದು. ಸಾಮಾನ್ಯವಾಗಿ ಸಭೆಯ ನಂತರ ಮಂಡಲಿಯ ಪತ್ರಿಕೆಗಳು ಬ್ಯಾಂಕಿಗೆ ಹಿಂತಿರುಗಬೇಕು.
- ಸಭೆಯ ಚರ್ಚೆಯ ಅಜೆಂಡಾದಲ್ಲಿ ತಿಳಿಸಿರುವ ವಿಷಯಗಳಿಗೆ ಸಂಬಂಧಿಸಿ ದಂತೆ ನಿರ್ದೇಶಕರು ಪರಿಶೀಲನೆಗಾಗಿ ವಿವಿಧ ವಿಭಾಗಗಳ ಪತ್ರಗಳು/ ಕಡತಗಳು/ ಟಿಪ್ಪಣಿಗಳ ದಾಖಲೆಗಳನ್ನು ನೇರವಾಗಿ ತರಿಸಿಕೊಳ್ಳಬಾರದು. ಎಲ್ಲಾ ಮಾಹಿತಿ/ಸ್ಪಷ್ಟೀಕರಣಕ್ಕಾಗಿ, ನಿರ್ಧಾರ ತೆಗೆದುಕೊಳ್ಳಲು ನಿರ್ದೇಶಕರಿಗೆ ಅಗತ್ಯವಾದಲ್ಲಿ ಕಾರ್ಯನಿರ್ವಾಹಕರಿಂದ ಲಭ್ಯವಾಗಬೇಕು.
- ನಿರ್ದೇಶಕರ ವಿಸಿಟಿಂಗ್ ಕಾರ್ಡ್ ಅಥವಾ ಲೆಟರ್ ಹೆಡ್‌ನಲ್ಲಿ ಬ್ಯಾಂಕಿನಲ್ಲಿ ಅವರ ನಿರ್ದೇಶಕತ್ವವನ್ನು ಸೂಚಿಸಬಹುದು, ಆದರೆ

Swabhimani Sahakari, Monthly, Posted at GPO-MBC Bengaluru Post Office 560001,
Posting Day 8th. Registered No. RNP/BGW/1744/2014-16.
RNI No. KARBIL - 2004/18001. Pages 20

ಬ್ಯಾಂಕಿನ ವಿಶಿಷ್ಟ ವಿನ್ಯಾಸದ ಲೋಗೋಗಳನ್ನು ವಿಸಿಟಿಂಗ್ ಕಾರ್ಡ್ ಅಥವಾ ಲೆಟರ್ ಹೆಡ್‌ನಲ್ಲಿ ಪ್ರದರ್ಶಿಸಬಾರದು.

- ನಿರ್ದೇಶಕರು ಬ್ಯಾಂಕಿನ ನಿಧಿಗಳನ್ನು ಸರಿಯಾಗಿ ಬಳಸಿಕೊಳ್ಳಲಾಗುತ್ತಿದೆಯೇ ಎಂಬುದನ್ನು ಖಚಿತಪಡಿಸಿಕೊಳ್ಳುವುದು ಮತ್ತು ಸಾಮಾನ್ಯ ಸದಸ್ಯರ ಪ್ರಯೋಜನಕ್ಕಾಗಿ ನ್ಯಾಯಯುತವಾದ ರೀತಿಯಲ್ಲಿ ಉಪಯೋಗಿಸಿಕೊಳ್ಳುವುದು.

**ಮಂಡಲಿಯ ಲೆಕ್ಕಪರಿಶೋಧನಾ ಸಮಿತಿ :**

- ಆಂತರಿಕ ಲೆಕ್ಕಪರಿಶೋಧನೆ / ಪರಿವೀಕ್ಷಣೆಯನ್ನು ಖಾತ್ರಿಪಡಿಸಿಕೊಳ್ಳಲು ಮತ್ತು ಪರಿಣಾಮಕತ್ವವನ್ನು ಹೆಚ್ಚಿಸುವ ಆಡಳಿತ ನಿರ್ವಹಣಾ ಸಾಧನವಾಗಿದೆ, ಅಪೆಕ್ಸ್ ಲೆಕ್ಕಪರಿಶೋಧನಾ ಸಮಿತಿಯನ್ನು ಮಂಡಲಿಯ ಮಟ್ಟದಲ್ಲಿ ಸ್ಥಾಪಿಸುವುದರಿಂದ ಆಂತರಿಕ ಲೆಕ್ಕಪರಿಶೋಧನೆ / ಪರಿವೀಕ್ಷಣೆ ಮತ್ತು ಬ್ಯಾಂಕುಗಳು ಇತರ ಅಧಿಕಾರಿಗಳಿಗೆ ಮೇಲುಸ್ತುವಾರಿಕೆ ಮತ್ತು ನಿರ್ದೇಶನಗಳನ್ನು ಒದಗಿಸುತ್ತದೆ.
- ಸಮಿತಿಯು ಅಧ್ಯಕ್ಷರು ಮತ್ತು ಮೂರು / ನಾಲ್ಕು ನಿರ್ದೇಶಕರು, ಒಬ್ಬರು ಅಥವಾ ಹೆಚ್ಚು ನಿರ್ದೇಶಕರು ಚಾಟರ್ಡ್ ಅಕೌಂಟೆಂಟ್ ಅಥವಾ ನಿರ್ವಹಣೆ, ಹಣಕಾಸು, ಲೆಕ್ಕಶಾಸ್ತ್ರ ಅಥವಾ ಲೆಕ್ಕಪರಿಶೋಧನಾ ವ್ಯವಸ್ಥೆ ಇತ್ಯಾದಿಗಳಲ್ಲಿ ಅನುಭವವನ್ನು ಹೊಂದಿರಬೇಕು.
- ಲೆಕ್ಕಪರಿಶೋಧನಾ ಸಮಿತಿಯು ಆರ್‌ಬಿಐ ಹೊರಡಿಸಿದ ಮಾರ್ಗಸೂಚಿಗಳನ್ನು ಅಳವಡಿಸಿಕೊಳ್ಳುವುದರ ಬಗ್ಗೆ ಪರಿಶೀಲನೆ ನಡೆಸುವುದು ಮತ್ತು ತ್ರೈಮಾಸಿಕ ಅಂತರಗಳಲ್ಲಿ ಮಂಡಲಿಗೆ ಅದರ ಮೇಲೆ ಟಿಪ್ಪಣಿಯನ್ನು ಸಲ್ಲಿಸುವುದು.

**ಲೆಕ್ಕಪರಿಶೋಧನಾ ಸಮಿತಿಯು ಏನು ಮಾಡಬೇಕು?**

- ಲೆಕ್ಕಪರಿಶೋಧನಾ ಸಮಿತಿಯು ನಿರ್ದೇಶನ ನೀಡುವುದು ಮತ್ತು ಬ್ಯಾಂಕಿನ ಒಟ್ಟು ಲೆಕ್ಕಪರಿಶೋಧನಾ ಕಾರ್ಯಗಳ ಕಾರ್ಯಾಚರಣೆಗಳ ಮೇಲೆ ಗಮನವಿಡುವುದು.
- ಒಟ್ಟು ಲೆಕ್ಕಪರಿಶೋಧನಾ ಕಾರ್ಯವು ಸಂಘಟನೆ ಆಧಾರಿತ ಕಾರ್ಯಾಚರಣೆಯ ವಿಷಯಗಳು, ವ್ಯವಸ್ಥೆಗಳು ಮತ್ತು ಆಂತರಿಕ ಲೆಕ್ಕಪರಿಶೋಧನೆ ಮತ್ತು ಪರಿವೀಕ್ಷಣೆಯ ಗುಣಮಟ್ಟ ನಿಯಂತ್ರಣ ಮತ್ತು ಪರಿಣಾಮಕಾರಿಯಾಗಿ ಅನುಸರಿಸಲು ಮತ್ತು ಬ್ಯಾಂಕಿನ ಶಾಸನಬದ್ಧ ಲೆಕ್ಕಪರಿಶೋಧನೆಯ ಮತ್ತು ರಿಸರ್ವ್ ಬ್ಯಾಂಕಿನ ಪರಿವೀಕ್ಷಣೆಯ ಮೇಲಿನ ಅನುಪಾಲನೆಯನ್ನು ಸೂಚಿಸುತ್ತದೆ.
- ಬ್ಯಾಂಕಿನ ಲೆಕ್ಕಪರಿಶೋಧನಾ ನೀತಿಗಳು / ವ್ಯವಸ್ಥೆಗಳ ಜೊತೆಗೆ ಬ್ಯಾಂಕಿನ ಖಾತೆಗಳು ಮತ್ತು ಲೆಕ್ಕಪತ್ರ ನಿಯಂತ್ರಣಗಳ ಸಮರ್ಪಕತೆಯಲ್ಲಿ ಹೆಚ್ಚಿನ ಪಾರದರ್ಶಕತೆಯ ಖಾತರಿ ದೃಷ್ಟಿಯಿಂದ ನಿಯತಕಾಲಿಕ ವಿಮರ್ಶೆ ಮಾಡುವುದು.
- ಲೆಕ್ಕಪರಿಶೋಧನಾ ಸಮಿತಿಯು ಇವುಗಳ ಮೇಲೂ ಸಹ ವಿಶೇಷವಾಗಿ ಗಮನಹರಿಸುವುದು,

i. ಅಂತರ ಶಾಖೆ ಖಾತೆಗಳ ಹೊಂದಾಣಿಕೆ;

ii. ಅಂತರ ಶಾಖೆ ಖಾತೆಗಳು ಮತ್ತು ಅಂತರ ಬ್ಯಾಂಕು ಖಾತೆಗಳಲ್ಲಿ ಸಮನ್ವಯಗೊಳಿಸಿಲ್ಲದ ದೀರ್ಘಕಾಲಿಕ ಬಾಕಿಯಿರುವ ನಮೂದುಗಳ ಮೇಲೆ;

iii. ವಿವಿಧ ಶಾಖೆಗಳಲ್ಲಿನ ಬಾಕಿ ಮೊತ್ತದೊಂದಿಗೆ ಪುಸ್ತಕಗಳ ಸಮತೋಲನೆ;

iv. ವಂಚನೆಗಳು; ಹಾಗೂ

v. ಇತರ ಪ್ರಮುಖ ವಿಷಯಗಳ ಮೇಲೆ.

**ಮಂಡಲಿಗೆ ಅಭಿವೃದ್ಧಿ ಕಾರ್ಯಕ್ರಮ :**

(ಮಾಧವ ದಾಸ್ ಸಮಿತಿಯ ಶಿಫಾರಸ್ಸುಗಳು)

- ಮಂಡಲಿಯ ಸದಸ್ಯರಿಗೆ ತಮ್ಮನ್ನು ತಾವು ಅಭಿವೃದ್ಧಿಪಡಿಸಿಕೊಳ್ಳಲು, ಸ್ಪರ್ಧಾತ್ಮಕ ನೀತಿ ಮತ್ತು ನಿರ್ಧಾರ ಮಾಡುವಲ್ಲಿ ನಿಯಮಿತವಾದ ಕಾರ್ಯಕ್ರಮದ ಅಗತ್ಯವಿದೆ.
- ಈ ಕಾರ್ಯಕ್ರಮವು ಮಂಡಲಿಯ ಸದಸ್ಯರಿಗೆ ಅಲ್ಪಾವಧಿ ಆಧಾರಿತ ಶಿಕ್ಷಣಗಳು, ಕಾರ್ಯಾಗಾರಗಳು, ವಿಚಾರ ಗೋಷ್ಠಿಗಳು ಮತ್ತು ಇತರ ಬ್ಯಾಂಕುಗಳಿಗೆ ಭೇಟಿ ನೀಡುವುದನ್ನೊಳಗೊಂಡಿರಬಹುದು.

**ಸಹಕಾರಿ ಬ್ಯಾಂಕುಗಳ ಕಾರ್ಪೋರೇಟ್ / ಸಾಂಸ್ಥಿಕ ಆಡಳಿತಕ್ಕಾಗಿ ಆರ್‌ಬಿಐನಿಂದ ತೆಗೆದುಕೊಂಡಿರುವ ಕ್ರಮಗಳು :**

1. ಪಾರದರ್ಶಕತೆ ಮತ್ತು ಗುಣಮಟ್ಟಗಳ ಬಹಿರಂಗಪಡಿಸುವಿಕೆ;
2. ಆಫ್ ಸೈಟ್ ಕಣ್ಗಾವಲು;
3. ಕ್ಷಿಪ್ರ ಮತ್ತು ಸರಿಪಡಿಸುವ ಕ್ರಮಗಳು;
4. ದೂರದೃಷ್ಟಿ ಚೌಕಟ್ಟು;
5. ಬಂಡವಾಳ ಪರ್ಯಾಪ್ತಿ;
6. ಆಸ್ತಿ ಮತ್ತು ಜವಾಬ್ದಾರಿ ನಿರ್ವಹಣೆ (ALM);
7. ಹೂಡಿಕೆ ಮೇಲಿನ ಪ್ರಾವಧಾನ. ■

ಬೆಳಗಾವಿ ವಿಭಾಗೀಯ ಕಛೇರಿಯ ವಿಳಾಸ : ಕರ್ನಾಟಕ ರಾಜ್ಯ ಸೌಹಾರ್ದ ಸಂಯುಕ್ತ ಸಹಕಾರಿ ನಿ., ವಿಭಾಗೀಯ ಕಛೇರಿ #436, ಮೊದಲನೆಯ ಮಹಡಿ, ಹುಯಿಲಗೋಳ ಕಟ್ಟಡ ಶನಿ ಮಂದಿರ ಹತ್ತಿರ, ಪಾಟೀಲ ಗಲ್ಲಿ, ಬೆಳಗಾವಿ-590001 ದೂ.ಸಂ : 0831-2401551.
ಗುಲ್ಬರ್ಗಾ ವಿಭಾಗೀಯ ಕಛೇರಿಯ ವಿಳಾಸ : ಗುಲ್ಬರ್ಗಾ ನಂ 1-4/3 ಎ ಸಂಜೀವರಾವ್ ದೇಸಾಯಿ ಬಡಾವಣೆ, ಕೆ.ಎಸ್.ಆರ್.ಟಿ.ಸಿ. ಗೆಸ್ಟ್‌ಹೌಸ್ ಹಿಂಭಾಗ ಗಾರ್ಡನ್ ರಸ್ತೆ, ಗುಲ್ಬರ್ಗಾ - 585102. ದೂ. 08472-270222.

Edited, Printed and Published by Sharangouda G. Patil –Managing Director, on behalf of Karnataka State Souharada Federal Co operative Ltd., Nirman Bhavan complex, Dr. Rajkumar Road, 1st Block, Rajajinagar, Bangalore-560 010